ಮಾಡುತ್ತಿರುವುದು. ಇಲ್ಲದಿದ್ದರೆ ಮಾನ್ಯ ಅಧ್ಯಕ್ಷರೇ, ಅವರು ಬರುವವರೆಗಾದರೂ ಸದನವನ್ನು ಮುಂದೂಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದು ಅವಮಾನ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವಮಾನ ಎಂದರೆ ಯಾರೂ ಅಧಿಕಾರಿಗಳು ಇಲ್ಲದಿದ್ದರೆ ಅದು ಅವಮಾನವಲ್ಲನೇ ? ಅವರ ಮೇಲೆ ಕ್ರಮವಾದರೂ ತೆಗೆದುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಅಧಿಕಾರಿಗಳು ಇರಬೇಕು ಅನ್ನತಕ್ಕ ಮಾನ್ಯ ಶ್ರೀರಾಮರೆಡ್ಡಿಯವರ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅಧಿಕಾರಿಗಳಿಗೆ ತಕ್ಷಣವೇ ಬರುವುದಕ್ಕೆ ಸೂಚನೆಯನ್ನು ಕೊಟ್ಟಿದ್ದೇನೆ. ದಯವಿಟ್ಟು ತಾವು ಸದನವನ್ನು ನಡೆಸಬೇಕು.

9. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದುವರಿದುದು)

ಡಾ; ಜಿ. ಪರಮೇಶ್ವರ್ (ಮಧುಗಿರಿ) : ಮಾನ್ಯ ಸಭಾಧ್ಯಕ್ಷರೇ, ನಾನು ರಾಜ್ಯದ ಕೈಗಾರಿಕೆಯ ಅಭಿವೃದ್ಧಿಯ ವಿಷಯದಲ್ಲಿ ಪ್ರಸ್ತಾಪ ಮಾಡುತ್ತಿದ್ದೆ. ಏನು 2001 ರಲ್ಲಿ ಈ ರಾಜ್ಯದಲ್ಲಿ ಒಂದು ಹೊಸ ಕೈಗಾರಿಕಾ ನೀತಿಯನ್ನು ಸರ್ಕಾರ ತಂದಿತ್ತು. ಅದರಲ್ಲಿ ಬಹಳ ಪ್ರಾಮುಖ್ಯವಾಗಿರತಕ್ಕ ಉದ್ದೇಶವನ್ನು

ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್ಕಾರದ ಪರ ಒಬ್ಬರಾದರೂ ಇರಬೇಕು ಸಾರ್. ಸದನದಲ್ಲಿ ಒಬ್ಬ ಮಂತ್ರಿಯೂ ಇಲ್ಲ.

ಅಧ್ಯಕ್ಷರು : ಮಾನ್ಯ ಸಿಂಧ್ಯಾರವರು ಇದ್ದಾರಲ್ಲಾ, ಅಲ್ಲೆಲ್ಲೋ ಮಾತನಾಡುತ್ತಿದ್ದಾರೆ. ಅವರು ಇದ್ದಾರೆ.

ಡಾ; ಜಿ. ಪರಮೇಶ್ವರ್ : ಬಹಳ ಉದ್ದೇಶವನ್ನು ಇಟ್ಟುಕೊಂಡು ಈ ಕೈಗಾರಿಕಾ ನೀತಿಯನ್ನು ರಾಜ್ಯದಲ್ಲಿ ಜನರಿಗೆ ಉದ್ಯೋಗವನ್ನು ಒದಗಿಸಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಯಾವ ಯಾವ ಅಧಿಕಾರಿಗಳು ಇರಬೇಕು ಎಂದು ಇದಕ್ಕೆ ನಿಯಮವಿಲ್ಲವೇ ?

ಅಧ್ಯಕ್ಷರು : ಈಗ ಅವರು ಸೂಚನೆಯನ್ನು ಕೊಟ್ಟಿದ್ದಾರೆ. ಮಾನ್ಯ ಪರಮೇಶ್ವರ್‌ರವರು ಮಾತನಾಡುತ್ತಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಮಾತನಾಡುವುದಕ್ಕೆ ಬೆಲೆ ಕೊಡಬೇಕೆಂದು ನಾವು ಹೇಳುತ್ತಿರುವುದು, ಸಂಬಂಧಪಟ್ಟ ಅಧಿಕಾರಿಗಳು ಇರಬೇಕು ಎಂದು ನಾವು ಹೇಳುತ್ತಿರುವುದು.

ಅಧ್ಯಕ್ಷರು : ಸೂಚನೆಯನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರಿಗೆ ನಾನು ಹೇಳಿದ್ದೇನೆ. ಅವರು ಅಧಿಕಾರಿಗಳಿಗೆ ಸೂಚನೆ ಕೊಟ್ಟು ಬಂದಿದ್ದಾರೆ. ಬರುತ್ತಾರೆ. ಅವರು ಮಾತನಾಡಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಪ್ರತಿ ದಿವಸ ಇಂಥ ಅಧಿಕಾರಿಗಳು ಇರಬೇಕು ಎಂದು ಒಂದು ನಿಯಮ ಇರುತ್ತದೆ ಎಂದು ನಾವು ಅಂದುಕೊಂಡಿದ್ದೇವೆ. ಇವತ್ತು ಯಾರು ಇರಬೇಕು ಅವರು ಇದ್ದಾರಾ ಎಂದು ನಾನು ಕೇಳುತ್ತಿರುವುದು. ಎಲ್ಲರೂ ಇರಬೇಕು ಎಂದು ನಾವು ಕೇಳುತ್ತಿಲ್ಲ.

ಅಧ್ಯಕ್ಷರು : ಇದ್ದಾರೆ ಎಂದು ಹೇಳಿ ನಾನು ಭಾವಿಸಿದ್ದೇನೆ.

ಡಾ; ಜಿ. ಪರಮೇಶ್ವರ್ : ಮಾನ್ಯ ಅಧ್ಯಕ್ಷರೇ, ಬಹಳ ಉದ್ದೇಶಗಳನ್ನು ಇಟ್ಟುಕೊಂಡು ಈ ಕೈಗಾರಿಕಾ ನೀತಿಯನ್ನು 2001 ರಲ್ಲಿ ರಾಜ್ಯಸರ್ಕಾರ ತಂದಿತು. ಇದನ್ನು 2006 ರವರೆಗೂ ಕೂಡ ಈ ನೀತಿ ಇರಬೇಕೆಂದು ಹೇಳಿ ತರುವಾಗಲೇ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಏನು ನಮಗೆ ಇವತ್ತು ರಾಜ್ಯದ ಆರ್ಥಿಕ ವ್ಯವಸ್ಥೆಗೆ ಶೇಕಡ 16.9 ಈ ಕೈಗಾರಿಕೆಯಿಂದ ಹಣ ಬರುತ್ತಿದೆ. ಇದನ್ನು ಹೆಚ್ಚು ಮಾಡುವುದರ ಜೊತೆಗೆ ಅಂದರೆ ನಾವೇನು ಇನ್‌ವೆಸ್ಟ್‌ಮೆಂಟನ್ನು ಹೆಚ್ಚು ಮಾಡಬೇಕಾಗುತ್ತದೆ. ತನ್ಮೂಲಕ ಈ ರಾಜ್ಯದಲ್ಲಿ ಜನರಿಗೆ ಉದ್ಯೋಗವನ್ನು ಹೆಚ್ಚು ಒದಗಿಸಿಕೊಡಬೇಕಾಗುತ್ತದೆ. ಎನ್ನತಕ್ಕಂಥ ಬಹಳ ಮೂಲವಾದ ಉದ್ದೇಶವನ್ನು ಇಟ್ಟುಕೊಂಡು ಈ ಒಂದು ಕೈಗಾರಿಕಾ ನೀತಿಯನ್ನು 2001 ರಲ್ಲಿ ರಾಜ್ಯ ಸರ್ಕಾರ ತಂದಿದೆ. ಇದರಲ್ಲಿ ಹೆಚ್ಚು ಒತ್ತನ್ನು ಕೊಡಬೇಕಾಗಿರತಕ್ಕದ್ದು ಕೃಷಿ ಕೈಗಾರಿಕೆಗೆ, ಕೃಷಿಗೆ, ಮತ್ತು ತೋಟಗಾರಿಕೆಗೆ, ಪಶುಸಂಗೋಪನೆ, human capital ಇದು ಒಂದು ಬಹಳ ಪ್ರಾಮುಖ್ಯವಾದ ವಿಚಾರ. ಏಕೆಂದರೆ ನಮ್ಮಲ್ಲಿ ಈ brain drain ವಿಷಯದಲ್ಲಿ ಬಹಳಷ್ಟು ಚರ್ಚೆ ಈ ರಾಜ್ಯದಲ್ಲಿ ಮತ್ತು ಈ ರಾಷ್ಟ್ರದಲ್ಲಿ ಆಗಿದೆ. ನಾವು human capital ಅನ್ನು ಯಾವುದಾದರೂ ಒಂದು ದೇಶದ ಅಭಿವೃದ್ಧಿಯನ್ನು ಗಮನಿಸಬೇಕಾದರೆ ಆ economic criteria ಅನ್ನು ಗಮನಿಸಬೇಕಾದರೆ human resource index ಅಂಥ ಒಂದು parameterಅನ್ನು ಮಾಡಿದ್ದಾರೆ. ಬಹಳ ಆಶ್ಚರ್ಯದ ಸಂಗತಿ ಎಂದು ಹೇಳಿದರೆ ಸೌತ್ ಕೊರಿಯಾ ಎನ್ನತಕ್ಕ ಸಣ್ಣ ರಾಷ್ಟ್ರದಲ್ಲಿ ಪ್ರಪಂಚದಲ್ಲೇ per capita GSP ಮಾಡಿರತಕ್ಕಂಥವರು ಅತಿ ಹೆಚ್ಚು ಎಂದರೆ ನಮಗೆ ಆಶ್ಚರ್ಯವಾಗಬಹುದು. ಆ ದೇಶವನ್ನು ಏತಕ್ಕೆ ಇವತ್ತಿನ ದಿವಸ ಈ ಜಪಾನ್‌ಗಾಗಲಿ ಮತ್ತು ಬೇರೆ ಅಭಿವೃದ್ಧಿ ರಾಷ್ಟ್ರಗಳಿಗೆ ಹೋಲಿಸುವುದಕ್ಕೆ ಅಂದರೆ ಎಷ್ಟು ಬೇಗ ಅದು ಅಭಿವೃದ್ಧಿಯಾಗಿದೆ ಎಂದು ಹೇಳಿದರೆ ಅಲ್ಲಿನ ಮಾನವ ಸಂಪನ್ಮೂಲವನ್ನು ಬಹಳ ಜಾಗರೂಕತೆಯಿಂದ ಅವರು ಹೆಚ್ಚು ಮಾಡಿಕೊಂಡು ಬಂದಿದ್ದಾರೆ ಹಾಗೆ ಎಂದು ಹೇಳಿ. ಇವತ್ತು ನಾವೂ ನಮ್ಮ ರಾಜ್ಯದಲ್ಲಿ ಆ ಕೆಲಸವನ್ನು ಮಾಡಬೇಕಾಗಿದೆ. ಬಹುಶಃ ಇದರಲ್ಲಿ ಬೇರೆ ಬೇರೆ ರೀತಿಯಲ್ಲಿ ವ್ಯಾಖ್ಯಾನಗಳಾಗಬಹುದು. ಬೇರೆ ಬೇರೆ ರೀತಿಯಲ್ಲಿ ಅಭಿಪ್ರಾಯಗಳು ಇರಬಹುದು. ಹೌದು, ಅವರು ಕೆಲವು ಹೇಳುತ್ತಾರೆ. ಮಾನ್ಯ ನಮ್ಮ ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು ಪ್ರಸ್ತಾಪ ಮಾಡಿದರು. ಯಾರು ಬಡ ಜನರ, ಟ್ಯಾಕ್ಸ್ ಪೇಯರ್ಸ್ ಮನಿಯಿಂದ ನೀವು ಇಂಜಿನಿಯರ್ಸ್ ಮಾಡುತ್ತೀರಿ, ಡಾಕ್ಟರ್ಸ್ ಮಾಡುತ್ತೀರಿ, ಅವನಿಂದ ನಮಗೇನು

ಉಪಯೋಗವಾಗುತ್ತದೆನ್ನುವ ಮೂಲಭೂತವಾದಂತಹ ಪ್ರಶ್ನೆಯನ್ನು ಅವರು ಹೇಳಿದರು. ಇದನ್ನು ನಾನೂ ಕೂಡ ಖಂಡಿತವಾಗಿ ಒಪ್ಪುತ್ತೇನೆ. ಆದರೆ ಇಡೀ ಪ್ರಪಂಚವೇ ಒಂದು ರೀತಿಯ ಸಣ್ಣ ಹಳ್ಳಿ. ಗ್ಲೋಬಲ್ ವಿಲೇಜ್ ಎಂದೇನು ನಾವು ಹೇಳುವ ಮಟ್ಟಕ್ಕೆ ಬಂದಿದ್ದೇವೆ. ಡಬ್ಲ್ಯೂಟಿ ಓವನ್ನು ನಾವು ಒಪ್ಪಿಕೊಂಡ ಮೇಲೆ ಇಡೀ ಪ್ರಪಂಚದ ವ್ಯಾವಹಾರಿಕವಾಗಿ, ಪ್ರಪಂಚವೇ ಒಂದು ರೀತಿಯಲ್ಲಿ ಒಂದು ದಿಕ್ಕಿಗೆ ಹೋಗುವಾಗ, ನಾವು ಈ ಪ್ರದೇಶದಲ್ಲಿ, ಈ ರಾಜ್ಯದಲ್ಲಿ ನಾವೊಂದು ಬೇರೆ ದಿಕ್ಕಿಗೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಹೋಗುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾವೂ ಕೂಡ ಇವತ್ತು ಹ್ಯೂಮನ್ ರೀಸೋರ್ಸಸ್ ಅನ್ನು ಹೆಚ್ಚಿನ ಮಟ್ಟಿಗೆ ಬೆಳೆಸತಕ್ಕಂಥ ವ್ಯವಸ್ಥೆ ಆಗಬೇಕು ಎನ್ನುವುದು. ಮೆ ಎಂದು ಹೇಳಿ ಒಂದು ರಿಪೋರ್ಟನ್ನು ಕೊಟ್ಟರು. ಮೆಂಜಿ ರಿಪೋರ್ಟ್ ಎಂದು ಹೇಳಿ ಈ ರಾಷ್ಟ್ರಕ್ಕೆ ಇನ್‌ಫರ್ಮೆಷನ್ ಟೆಕ್ನಾಲಜಿ ಮತ್ತು ಹ್ಯೂಮನ್ ರೀಸೋರ್ಸ್ ಬಗ್ಗೆ ಕೊಟ್ಟರು. ಅವರು ಕೊಟ್ಟಂತಹ ಸಂದರ್ಭದಲ್ಲಿ 2008ಕ್ಕೆ 32 ಲಕ್ಷ ಜನ ಐಟಿ ಇಂಜಿನಿಯರ್ಸ್ ಬೇಕು ಎಂದು ಹೇಳಿ ಒಂದು ಹಂತದಲ್ಲಿ ವರದಿ ಕೊಟ್ಟರು. ಅಂದರೆ ನಾವು ಅಷ್ಟು ಪ್ರೊಡ್ಯೂಸ್ ಮಾಡುವುದಕ್ಕೆ ಆಗುವುದೇ ಇಲ್ಲ. ಇನ್ನಿಷ್ಟು ಇಂಜಿನಿಯರಿಂಗ್ ಕಾಲೇಜು ಕೊಡಿ, ಇನ್ನಿಷ್ಟು ಪಾಲಿಟೆಕ್ನಿಕ್ ಕೊಡಿ. ಆ ಸಂಖ್ಯೆಗೆ ನಾವು ಹೋಗುವುದಕ್ಕೆ ಆಗುವುದಿಲ್ಲ. ಅಂದರೆ ಅಷ್ಟರಮಟ್ಟಿಗೆ ನಮಗೆ ಅವಕಾಶಗಳು ಇನ್ನೂ ಕೂಡ ಬರುತ್ತವೆ ಹಾಗೆ ಎಂದು ಹೇಳಿ. ಅದು ಕೃಷಿ ಕ್ಷೇತ್ರ ಇರಬಹುದು, ಅದೇ ಅಗ್ರಿಕಲ್ಚರ್ ಗ್ರಾಜುಯೇಟ್ಸ್, ಹಾರ್ಟಿಕಲ್ಚರ್ ಗ್ರಾಜುಯೇಟ್ಸ್, ಇವತ್ತೂ ಕೂಡ ನಮ್ಮ ಮನೆಯಲ್ಲಿ ಏನಾದರೂ ಬಿಎಲೆಕ್ಟ್ರಿಯನ್ ಬೇಕು ಹೇಳಿದರೆ ಅಥವಾ ಒಬ್ಬ ಪ್ಲಂಬರ್ ಬೇಕು ಎಂದರೆ ಸಿಗುವುದು ಬಹಳ ಕಷ್ಟ. ಈ ರೀತಿ ಇದೆ. ಅದಕ್ಕಾಗಿನೇ ಇವತ್ತು ನಮ್ಮ ಈ ಕೈಗಾರಿಕಾ ನೀತಿಯಲ್ಲಿ ಈ ಸಮ್ಮಿಶ್ರ ಸರ್ಕಾರವೂ ಕೂಡ ಅದಕ್ಕೆ ಪ್ರೋತ್ಸಾಹ ಕೊಡಬೇಕು ಎನ್ನುವಂತಹ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಅದ್ದರಿಂದ ಇದು ಕೈಗಾರಿಕಾ ನೀತಿ. ಇವತ್ತಿಗೆ ಕೂಡ ಮುಂದುವರಿದುಕೊಂಡು ಹೋಗತಕ್ಕಂಥ ಅವಶ್ಯಕತೆ ಇದೆ. ಅದಕ್ಕೆ ಬೇಕಾದಂಥ ಸ್ಟ್ರಾಟಜಿಗಳನ್ನು ಸರ್ಕಾರ ಮುಂದಿನ ದಿನಗಳಲ್ಲಿ ಮಾಡುತ್ತದೆ ಎಂದು ಹೇಳಿ ನಾನು ಭಾವಿಸಿಕೊಂಡಿದ್ದೇನೆ. ಮತ್ತೊಂದು ಬಹಳ ಪ್ರಾಮುಖ್ಯವಾದ ಕ್ಷೇತ್ರ. ನೀರಾವರಿ ಕ್ಷೇತ್ರವನ್ನು ಬಹಳ ದಿವಸದಿಂದಲೂ ಕೂಡ ನಮ್ಮ ರಾಜ್ಯದಲ್ಲಿ ಬಂದಂತಹ ಎಲ್ಲಾ ಸರ್ಕಾರಗಳೂ ಕೂಡ ಅದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟು ಕೊಂಡೇ ಬಂದಿದ್ದಾರೆ. ಅದು ಏನೇ ಬರತಕ್ಕ ಘಟನೆಗಳು ಇರಬಹುದು. ಕಾವೇರಿ ಚಳುವಳಿ, ಮತ್ತೊಂದು ಚಳುವಳಿ. ಈ ರೀತಿ ಆಗತಕ್ಕಂಥ ಅನೇಕ ಘಟನೆಗಳು ನಡೆದರೂ ಕೂಡ ಅನೇಕ ತೊಂದರೆಗಳಿದ್ದರೂ ಸಹ ಈ ಕ್ಷೇತ್ರಕ್ಕೆ ಹೆಚ್ಚು ಪ್ರಾತಿನಿಧ್ಯವನ್ನು ನಮ್ಮ ಆಯವ್ಯಯದಲ್ಲಿ ಕೊಡಬೇಕು ಎನ್ನತಕ್ಕದ್ದನ್ನು ಪ್ರತಿ ಒಂದು ಸರ್ಕಾರವೂ ಮಾಡಿಕೊಂಡು ಬಂದಿದೆ. ನಮ್ಮ ಹಿಂದಿನ ಸರ್ಕಾರದಲ್ಲಿ ಕೂಡ ಆ ಕೆಲಸವನ್ನು ಮಾಡಿದ್ದಾರೆ. ಆದರೆ

ಒಂದು ಬಹಳ ಮೆಚ್ಚತಕ್ಕಂಥ ಕೆಲಸ ಏನು ಅಂದರೆ ಈಗ ನಾವು ಸಾಲವನ್ನು ತೆಗೆದುಕೊಂಡು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಆಗಿರಬಹುದು, ಕಾವೇರಿ ಜಲಾನಯನ ಪ್ರದೇಶದ ಅಭಿವೃದ್ಧಿ ಆಗಿರಬಹುದು. ಸಾಲದ ರೂಪದಲ್ಲಿ ಹಣವನ್ನು ತೆಗೆದುಕೊಂಡು ಅನೇಕ ರೀತಿಯಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನ ಮಾಡಿದೆವು. ಇದರ ಜೊತೆಗೆ ಈ ಸಾಲವನ್ನು ಏನು ನಾವು ಫೈನಾನ್ಸಿಯಲ್ ಇನ್‌ಸ್ಟಿಟ್ಯೂಷನ್ಸ್‌ನಿಂದ ತೆಗೆದುಕೊಂಡು ಮಾಡುತ್ತಿದ್ದೇವೆ, ಇದರ ಜೊತೆಗೆ ಜನರ ಕೈಯಿಂದ ಕೂಡ ಒಂದು ಕಾಂಟ್ರಿಬ್ಯೂಷನ್ ಆಗಬೇಕು. ಅವರೂ ಕೂಡ ಈ ಯೋಜನೆ ನಮ್ಮದು ಎನ್ನುವಂತಹ ಭಾವನೆ ಬರಬೇಕಾಗುತ್ತದೆ. ಎನ್ನುವ ದೃಷ್ಟಿಯಲ್ಲಿ, ಜೊತೆಗೆ ಈ ಕಾರ್ಯಕ್ರಮವನ್ನು ಇಂಪ್ಲಿಮೆಂಟ್ ಮಾಡುವಂತಹ ಸಂದರ್ಭದಲ್ಲಿ, ಈ ಕಾರ್ಯಕ್ರಮವನ್ನು ಅಭಿವೃದ್ಧಿ ಮಾಡುವಂತಹ ಸಂದರ್ಭದಲ್ಲಿ ಆ ಜನಗಳ ಸಹಭಾಗಿತ್ವ ಇರಬೇಕು ಹಾಗೆ ಎನ್ನುವ ದೃಷ್ಟಿ ಇಟ್ಟುಕೊಂಡು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಏರಿಯಾಗೆ ಒಂದು ಸಂಸ್ಥೆಯನ್ನು ಮಾಡಿದೆವು. ಅದು ಕೃಷ್ಣಾ ಭಾಗ್ಯ ಜಲ ನಿಗಮ ಎಂದು ಹೇಳಿ ಆ ಕಂಪನಿಯನ್ನು ಮಾಡಿ ಅದರ ಮೂಲಕ ಮಾರ್ಕೆಟ್ ಬಾರೋಯಿರ್‌ಗ್ಸ್, ಮತ್ತು ಬಾಂಡ್‌ಗಳನ್ನು ರೈಸ್ ಮಾಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಅದರಲ್ಲಿ 2001–02ಕ್ಕೆ ಸುಮಾರು 4822 ಕೋಟಿ ರೂಪಾಯಿಯಷ್ಟು ಹಣವನ್ನು ಮಾರ್ಕೆಟ್ ಬಾರೋಯಿಂಗ್ಸ್‌ನಲ್ಲಿ ಆ ಸಂಸ್ಥೆಗೆ ಮಾಡಿಕೊಟ್ಟಿದ್ದಾರೆ. ಈಗಾಗಲೇ ಟ್ರಾನ್ಸಪರೆನ್ಸಿ ಆಕ್ಟ್ ಬಂದಿದೆ. ಯಾವ ರೀತಿ ಈ ಹಣವನ್ನು ಖರ್ಚು ಮಾಡಬೇಕು. ಎನ್ನುವಂತಹದು ತೀರ್ಮಾನ ಆಗುವಂತಹುದು. ಅದರ ಇಂಪ್ಲಿಮೆಂಟೇಶನ್ ವಿಚಾರ ಇದೆ. ಆ ಕಾರ್ಯಕ್ರಮದ ಇಂಪ್ಲಿಮೆಂಟೇಶನ್ ಏನು ಇದೆ. ಅದನ್ನು ರೆಗ್ಯುಲೇಟ್ ಮಾಡುವುದಕ್ಕೆ ಅದರ ವಸ್ತು ಸ್ಥಿತಿ ನೋಡುವುದಕ್ಕೆ ಈ ಒಂದು ಸಂಸ್ಥೆಯಿಂದ ಸಾಧ್ಯವಾಗುತ್ತದೆ ಎಂದು ಹೇಳಿ ಅದನ್ನು ಮಾಡಿದ್ದಾರೆ ಅದರ ಜೊತೆಗೆ ಕಾವೇರಿ ಬೇಸಿನ್ ವಿಚಾರ. ಕಾವೇರಿ ಬೇಸಿನ್‌ನಲ್ಲಿ ಕೂಡ ಇಂತಹದೇ ಒಂದು ಸಂಸ್ಥೆಯನ್ನು ಕಾವೇರಿ ಭಾಗ್ಯ ಜಲ ನಿಗಮ ಎಂದು ಹೇಳಿ ಕೂಡ ಇಲ್ಲಿ ಮಾಡುವುದರ ಮೂಲಕ ಅದರಲ್ಲೂ ಸುಮಾರು 1500 ಕೋಟಿ ರೂಪಾಯಿಯಷ್ಟು ಹಣವನ್ನು ಮಾರ್ಕೆಟ್ ಬಾರೋಯಿಂಗ್ಸ್ ಮತ್ತು ಬಾಂಡ್‌ಗಳ ಮೂಲಕ ಸಂಗ್ರಹಣೆ ಮಾಡತಕ್ಕಂಥ ಕೆಲಸವನ್ನು ಇವತ್ತು ಮಾಡಿದ್ದಾರೆ. ಇವತ್ತು ಪ್ರಸ್ತುತ ಸರ್ಕಾರ ಇದಕ್ಕೆ ಪ್ರೋತ್ಸಾಹವನ್ನು ಕೊಡುತ್ತೇನೆ. ಅಂದರೆ ಈ ನೀರಾವರಿ ಕ್ಷೇತ್ರಕ್ಕೆ ಇನ್ನೂ ಹೆಚ್ಚಿನ ಆದ್ಯತೆ ಕೊಡುತ್ತೇವೆ ಎಂದಿದ್ದಾರೆ. ಇನ್ನೂ ಹೆಚ್ಚಾಗಬೇಕು. ಏಕೆಂದರೆ ಬರೇ ನಮಗೆ ಆಗಿರತಕ್ಕದ್ದು 28.63 ಲಕ್ಷದಿಂದ 30.22ಲಕ್ಷ ಹೆಕ್ಟೇರ್ ನೀರಾವರಿಗೆ ಆಗಿರತಕ್ಕದ್ದು ಅಷ್ಟೇ. ಇನ್ನೂ ಹೆಚ್ಚಾಗಬೇಕು. ಏಕೆಂದರೆ ನಾವು ಕೃಷಿ ಕ್ಷೇತ್ರದಲ್ಲಿ ಹೆಚ್ಚು ಪ್ರೊಡಕ್ಷನ್ ಆಗಬೇಕು ಎಂದು ಹೇಳಿದರೆ ನೀರಾವರಿ ಕ್ಷೇತ್ರದಿಂದ ಹೆಚ್ಚು ಪ್ರೊಡಕ್ಷನ್ ಆಗುತ್ತದೆ, ಬರೇ 30 ಪರ್ಸೆಂಟ್ ಅಷ್ಟೇ ನಮಗೆ ನೀರಾವರಿ ಇರತಕ್ಕದ್ದು, 70 ಭಾಗ ರೈಸ್ ಫೆಡ್ ಏರಿಯಾ ಇನೆ. ಆದ್ದರಿಂದ ಈ 30 ಪರ್ಸೆಂಟ್ ಅನ್ನು

ಇನ್ನೂ ನಾವು ಹೆಚ್ಚು ಮಾಡುತ್ತಾ ಹೋದರೆ ನಮಗೆ ಹೆಚ್ಚಿನ ರೀತಿಯಲ್ಲಿ ಅನುಕೂಲ ಆಗುತ್ತದೆ ಎನ್ನುವ ದೃಷ್ಟಿ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈಗ ನೀರಾವರಿ ಬಗ್ಗೆ ಹೇಳತಕ್ಕ ಸಂದರ್ಭದಲ್ಲಿ ಒಂದೆರಡು ಕ್ಲಾರಿಫಿಕೇಶನ್ ಅವರೇ ಹೇಳಿದರೆ ಒಳ್ಳೆಯದು ಎಂದು ಕಾಣುತ್ತದೆ. ಕರ್ನಾಟಕ ರಾಜ್ಯದಲ್ಲಿ 28 ಪರ್ಸೆಂಟ್ ನೀರಾವರಿ ಆಗಿದೆ ಎಂದು ಹೇಳಿದ್ದಾರೆ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ಮಾನ್ಯ ಪರಮೇಶ್ವರ್ ಅವರು ಮಾತನಾಡಲಿ. ಮಾನ್ಯ ಮಂತ್ರಿಗಳು ಮಾತನಾಡುವಾಗ ತಾವು ಕ್ಲಾರಿಫಿಕೇಶನ್ ಕೇಳಬೇಕು. ಈಗ ಏನಾಗಿದೆ ಅವರು ಇನಿಷಿಯೇಟ್ ಮಾಡುತ್ತಿದ್ದಾರೆ ಸದಸ್ಯರು. ಅದರ ಬಗ್ಗೆ ನೀವು ಕ್ಲಾರಿಫಿಕೇಶನ್ ಕೇಳಿದರೆ ಅವರೇನು ಕೊಡುತ್ತಾರೆ ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಹೇಳುವಾಗ ಅವರಿಗೆ ಅನುಕೂಲ ಆಗಲಿ ಎಂದು ಹೇಳುತ್ತಿದ್ದೇನೆ. 28 ಪರ್ಸೆಂಟ್ ಇರಿಗೇಷನ್ ಡೆವಲಪ್ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಅದರಲ್ಲಿ ಮೈನಲ್ ಇರಿಗೇಷನ್‌ನಲ್ಲಿ ಎಷ್ಟು ಡೆವಲಪ್ ಆಗಿದೆ ? ಮೇಜರ್ ಇರಿಗೇಷನ್‌ನಲ್ಲಿ ಎಷ್ಟು ಡೆವಲಪ್ ಆಗಿದೆ ಎಂದು ಹೇಳಲಿಲ್ಲ. ಅದನ್ನು ಕೇಳುತ್ತಿದ್ದೇನಷ್ಟೇ.?

ಅಧ್ಯಕ್ಷರು : ಅವರು ಏನು ಹೇಳಬೇಕೋ ಹೇಳುತ್ತಾರೆ. ಕ್ಲಾರಿಫಿಕೇಶನ್ ಅನ್ನು ನೀವು ಮಂತ್ರಿಗಳು ಉತ್ತರ ಕೊಡುವಾಗ ಕೇಳಿ. ನೀವು ನೀವೇ ಸಂವಾದ ಮಾಡಿದರೆ ಹೇಗೆ ?

ಡಾ; ಜಿ. ಪರಮೇಶ್ವರ್ : ಸಂಬಂಧಪಟ್ಟ ಮಂತ್ರಿಗಳು ಡೀಟೇಲ್ಡ್ ಉತ್ತರ ಅವರು ಮಾತನಾಡುವಾಗ ಕೊಡುತ್ತಾರೆ.

ಅಧ್ಯಕ್ಷರು : ಮಾನ್ಯ ಪರಮೇಶ್ವರ್ ಅವರೇ, ಈಗ ನೀವು ಅಡ್ಡಡ್ಡವಾಗಿ ಉತ್ತರವನ್ನು ಅವರಿಗೆ ಕೊಡುವುದು ಬೇಡ. ಸರ್ಕಾರದವರು ಉತ್ತರ ಕೊಡುವಾಗ ಕೊಡುತ್ತಾರೆ. ನೀವು ನಿಮ್ಮ ಮಾತನ್ನು ಮುಂದುವರಿಸಿ.

ಡಾ; ಜಿ. ಪರಮೇಶ್ವರ್ : ಹಾಗೇ ಆಗಲಿ ಅಧ್ಯಕ್ಷರೇ, ಏಕೆಂದರೆ ನಾನು 28ರಿಂದ 30 ಪರ್ಸೆಂಟ್ ಎಂದು ಹೇಳಿದೆ. ಇದು ಹೆಚ್ಚಾಗಬೇಕು. ಉದ್ದೇಶ ಒಂದೇ. ನಮಗೇನಪ್ಪ ಅಂದರೆ ಇರಿಗೇಷನ್ ಏರಿಯಾ ಜಾಸ್ತಿ ಆದಷ್ಟೂ ನಮಗೆ ಪ್ರೊಡಕ್ಷನ್ ಜಾಸ್ತಿ ಆಗುತ್ತದೆ. ಅಲ್ಟಿಮೇಟ್ ಏನಪ್ಪ ಉದ್ದೇಶ ಎಂದರೆ ನಮ್ಮ ರಾಜ್ಯದ ಆಹಾರ ಉತ್ಪಾದನೆ ಜಾಸ್ತಿ ಆಗಬೇಕು. ತನ್ಮೂಲಕ ಆರ್ಥಿಕ ವ್ಯವಸ್ಥೆಗೆ ಹೆಚ್ಚು ಶಕ್ತಿ ಬರುತ್ತದೆ ಎನ್ನುವ ದೃಷ್ಟಿಯಿಂದ ಏನು ಕ್ರಮಗಳನ್ನು ಈ ಹಿಂದಿನ ಸರ್ಕಾರ ಮಾಡಿತ್ತು ಮತ್ತು ಅದನ್ನು ಈಗಲೂ ಕೂಡ ಮುಂದುವರಿಸಿಕೊಂಡು ಹೋಗತಕ್ಕ ಪ್ರಸ್ತಾಪವನ್ನು ಈಗ ಸಮ್ಮಿಶ್ರ ಸರ್ಕಾರವು ಮಾನ್ಯ ರಾಜ್ಯಪಾಲರ ಮೂಲಕ ಮಾಡಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಮಗೆಲ್ಲರಿಗೂ ಕೂಡ ಎಲ್ಲೋ ಪರ್ಮನೆಂಟ್ ಅಡ್ರೆಸ್ ಇದೆ, ಇರಬೇಕು. ಈ ದೇಶದ ಪ್ರತಿ ಒಬ್ಬ ಪ್ರಜೆಗೂ ಕೂಡ ಎಲ್ಲೋ ಒಂದು [illegible]

ಇರಬೇಕು. ಈ ಊರಿನವನು, ಈ ಊರಿನವನು ಎಂದು. ಈಗ ನಮ್ಮ ಊರುಗೊಲ್ಲಹಳ್ಳಿ. ಅದು ತುಮಕೂರು ಹತ್ತಿರ ಇದೆ. ಅದನ್ನು ನಾವು ಈಗ ಸಿದ್ಧಾರ್ಥ ನಗರ ಎಂದು ಹೇಳಿ ಬದಲಾವಣೆ ಮಾಡಿದ್ದೇನೆ. ನನ್ನದು ಪರ್ಮನೆಂಟ್ ಅಡ್ರೆಸ್ ಅದು. ನಾನು ಬೆಂಗಳೂರಿಗೆ ಟೆಂಪರರಿಯಾಗಿ ಬಂದಿರತಕ್ಕದ್ದು. ಈಗ ನನಗೆ ಅಲ್ಲಿ ಒಂದು ಮನೆ ಇದೆ ಆ ಮನೆಗೆ ನನ್ನ ಅಡ್ರೆಸ್ ಇದೆ, ಆದರೆ ಲಕ್ಷಾಂತರ ಜನರಿಗೆ ಈ ರಾಜ್ಯದಲ್ಲಿ ಈ ದೇಶದಲ್ಲಿ, they have absolutely no permanent address. ನೀವು ಎಲ್ಲಿಯಾದರೂ ಅವರನ್ನು ಹುಡುಕಿಕೊಂಡು ಹೋದರೆ ಆತ ಊರಿನಲ್ಲಿ ಇರುವುದಿಲ್ಲ ಅವನು ಇನ್ನೊಂದು ಊರಿನಲ್ಲಿ ಇರುತ್ತಾನೆ. ಮತ್ತೊಂದು ಊರಿಗೆ ಹೋಗುತ್ತನೆ. ಏಕೆಂದರೆ ಅವನಿಗೆ ಯಾವುದೇ ರೀತಿಯ ಒಂದು ವಸತಿ ಸೌಕರ್ಯ ಇಲ್ಲ. ಇದನ್ನೇ ಗಮನದಲ್ಲಿಟ್ಟುಕೊಂಡು ಬಂದಂತಹ ಎಲ್ಲಾ ಸರ್ಕಾರಗಳೂ ಕಾರ್ಯ ಮಾಡಿದೆ. ನಾನೇನು ಬರೇ ಕಾಂಗ್ರೆಸ್ ಸರ್ಕಾರ ಕಾರ್ಯ ಮಾಡಿತು. ನಾವಷ್ಟೇ ಮನೆಗಳನ್ನು ಕಟ್ಟಿಕೊಟ್ಟಿವು ಎಂದು ಹೇಳುವಂತಹದಕ್ಕೆ ಹೋಗುವುದಿಲ್ಲ. ಪ್ರತಿ ಒಂದು ಸರ್ಕಾರವೂ ಸಹ ಬಹಳ ದಿವಸಗಳಿಂದಲೂ ಈ ಮನೆಗಳನ್ನು ಬಡವರಿಗೆ ಕಟ್ಟಿಕೊಡತಕ್ಕಂಹ ಕೆಲಸವನ್ನು ಮಾಡಿಕೊಂಡೇ ಬಂದಿದೆ, ಆದರೆ ಹಿಂದಿನ ಸರ್ಕಾರ ಯಾರು ಮನೆಗಳು ಇಲ್ಲದವರು ಇದ್ದಾರೆ ಎಂಬ ಬಗ್ಗೆ ಒಂದು ಅಂಕಿ ಅಂಶ ತೆಗೆಯಬೇಕು ಎಂದು ಹೇಳಿ ತೆಗೆದೆವು. ಸುಮಾರು 12 ಲಕ್ಷ ಜನರಿಗೆ ಮನೆಗಳು ಇಲ್ಲ, ಇದು ಒಂದು ಹಂತದಲ್ಲಿ ಬಂದಿದ್ದು. ನಂತರ ಅದು ಹೆಚ್ಚಾಗಿ ಇರಬಹುದು. 12 ಲಕ್ಷ ಮನೆಗಳು ಇಲ್ಲದೇ ಇರುವವರು ಇದ್ದಾರೆ ಎಂದು ಹೇಳಿ ಒಂದು ಅಂದಾಜು ಬಂತು. ಆದಾದ ಮೇಲೆ ಸರ್ಕಾರ ತೀರ್ಮಾನ ಮಾಡಿತು. ಈ 12 ಲಕ್ಷ ಜನರಿಗೆ ಈ ಐದು ವರ್ಷದ ಅವಧಿಯಲ್ಲಿ ಮನೆಗಳನ್ನು ಕಟ್ಟಿಕೊಡಬೇಕು ಎಂದು ತೀರ್ಮಾನ ಮಾಡಿತು. ಬಹಳ ಆಶ್ಚರ್ಯ ಆಗುತ್ತದೆ. 9 ಲಕ್ಷ ಮನೆಗಳನ್ನು ನಾಲ್ಕೂವರೆ ವರ್ಷದಲ್ಲಿ ಸರ್ಕಾರ ಕಟ್ಟತಕ್ಕಂಥ ಕೆಲಸವನ್ನು ಮಾಡಿತು. 9 ಲಕ್ಷ ಜನರಿಗೆ ಪರ್ಮನೆಂಟ್ ಆಡ್ರೆಸ್ ಸಿಕ್ಕಿತು. ಈ ಕಾರ್ಯಕ್ರಮ ಮುಂದುವರಿಸಿಕೊಂಡು ಹೋಗಬೇಕು ಏಕೆಂದರೆ ಇದು ಇವತ್ತು ಪಕ್ವಾತೀತವಾಗಿ ನಡೆಯತಕ್ಕಂಥಹದು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾ ಅವರು ಇದ್ದುದರಿಂದ ಪ್ರಾಯಶಃ ಮಂತ್ರಿ ಮಂಡಲದಲ್ಲಿ ಇದರ ಬಗ್ಗೆ ಮಾತನಾಡಬಹುದು. ಈಗ ಮಾನ್ಯ ಸಿಂಧ್ಯಾ ಅವರೇ, ಮಾನ್ಯ ಪರಮೇಶ್ವರ್ ಅವರು ಮನೆಗಳನ್ನು ಕೊಟ್ಟಿರುವ ಬಗ್ಗೆ ಹೇಳುತ್ತಿದ್ದಾರೆ. ಈಗ 31ನೇ ಮೇ ಒಳಗೆ ಯಾರ್ಯಾರಿಗೆ ಮನೆಗಳನ್ನು ಕೊಟ್ಟಿದ್ದಾರೆ ರಿಜಿಸ್ಟರ್ ಆಗದೇ ಇದ್ದವರದ್ದನ್ನು ಕ್ಯಾನ್ಸಲ್ ಮಾಡಿ ಎಂದು ಆದೇಶವನ್ನು ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೋರೇಷನ್‌ನಿಂದ, ಕೊಟ್ಟಿದ್ದಾರೆ. ಈಗ ಕೆಲವು ಸಾರಿ ಅಧಿಕಾರಿಗಳ ತಪ್ಪಿನಿಂದ ರಿಜಿಸ್ಟ್ರೇಷನ್ ಆಗಿರುವುದಿಲ್ಲ. ದಾಖಲೆಗಳನ್ನು ಗ್ರಾಮ ಪಂಚಾಯಿತಿಗೆ ಕೊಟ್ಟಿರುತ್ತಾನೆ. ಒಬ್ಬೊಬ್ಬ ಪಂಚಾಯಿತಿ

ಸೆಕ್ರೆಟರಿ 2–3 ಗ್ರಾಮ ಪಂಚಾಯಿತಿಯಲ್ಲಿ ಸೆಕ್ರೆಟರಿ ಆಗಿರುತ್ತಾನೆ. ರಿಜಿಸ್ಟ್ರೇಷನ್ ಆಗುತ್ತಿಲ್ಲ. ಅದಕ್ಕೋಸ್ಕರ ಕ್ಯಾನ್ಸೆಲ್ ಮಾಡಬಾರದು. ಆತನಿಗೆ ಕಾಲಾವಧಿ ಕೊಡಬೇಕಾಗುತ್ತದೆ. ನಾನು ತಮಗೆ ಅದರ ಬಗ್ಗೆ ಬರವಣಿಗೆಯಲ್ಲಿ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೇ, ಇದು ಗಂಭೀರವಾದ ವಿಷಯ. ಮೇ 31ನೇ ತಾರೀಖಿನೊಳಗೆ ಯಾವ ಫಲಾನುಭವಿ ರಿಜಿಸ್ಟರ್ ಮಾಡಿಸಿಕೊಂಡಿಲ್ಲವೋ ಅದೆಲ್ಲವನ್ನೂ ಸಬ್ ರಿಜಿಸ್ಟ್ರಾರ್‌ರವರು ರಿಜೆಕ್ಟ್ ಮಾಡುತ್ತಿದ್ದಾರೆ.

ಅಧ್ಯಕ್ಷರು : ತಾವು ಮಾತನಾಡುವಾಗ ಇದನ್ನು ಪ್ರಸ್ತಾಪಿಸಬಹುದು. ಈಗ ಮಾನ್ಯ ಸದಸ್ಯರಾದ ಡಾ; ಜಿ. ಪರಮೇಶ್ವರ್ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಡಾ; ಜಿ, ಪರಮೇಶ್ವರ್ : ಸನ್ಮಾನ್ಯ ಅಧ್ಯಕ್ಷರೇ, ಹಿಂದಿನ ಸರ್ಕಾರದ್ದೇ ಹೇಳುತ್ತಾರಲ್ಲಾ ಮುಂದಿನ ಸರ್ಕಾರದ್ದು ಹೇಳುವುದಿಲ್ಲವೆನ್ನುವ ಭಾವನೆ ಬರಬಾರದು. ಏಕೆಂದರೆ, ನಾನು ಇದನ್ನು ಸಪೋರ್ಟಿಂಗ್ ಆಗಿ ತೆಗೆದುಕೊಂಡು ಹೇಳುತ್ತಿದ್ದೇನೆ, ಯಾವ್ಯಾವ ಕಾರ್ಯಕ್ರಮಗಳು ಈ ಸರ್ಕಾರ, ಮುಂದೆ ಬರುವ ಸರ್ಕಾರ ಮತ್ತು ನಿರಂತರವಾಗಿ ಎಲ್ಲಾ ಸರ್ಕಾರಗಳಿಗೂ ಅನ್ವಯಿಸುವ ಅನೇಕ ವಿಷಯಗಳು ಇದರಲ್ಲಿದೆ. ಇದರಲ್ಲಿ ಯಾವುದೇ ಸ್ವಾರ್ಥವಿಲ್ಲ,. ಹಿಂದಿನ ಸರ್ಕಾರ ಮಾಡಿದೆ, ಮುಂದಿನ ಸರ್ಕಾರ ಮಾಡಬಾರದು ಅಥವಾ ಈ ಸರ್ಕಾರ ಮಾಡಬಾರದೆಂದಲ್ಲ, ಅದಕ್ಕೋಸ್ಕರವೇ ಕೆಲವು ಅಂಶಗಳನ್ನು ನನ್ನ ಭಾಷಣದಲ್ಲಿ ಆಯ್ಕೆ ಮಾಡಿಕೊಂಡಿದ್ದೇನೆ. ಇತ್ತೀಚೆಗೆ ರಾಜ್ಯಪಾಲರು ಮಾಡಿದ ಭಾಷಣದಲ್ಲಿ ಈ ಸಮ್ಮಿಶ್ರ ಸರ್ಕಾರ ತಿಳಿಸಿರುವುದೇನೆಂದರೆ, "ನನ್ನ ಸರ್ಕಾರವು ಸ್ಥಿರ ಮತ್ತು ಸಂಪದ್ಭರಿತ ಸಮಾಜಕ್ಕೆ ಮೂಲ ಆಧಾರವಾಗಿ ವಸತಿಯ ಅವಶ್ಯಕತೆ ಇದೆಯೆಂಬುದನ್ನು ಮನಗಂಡಿದೆ. ರಾಜೀವ್‌ಗಾಂಧಿ ವಸತಿ ನಿಗಮದ, ಕರ್ನಾಟಕ ಗೃಹ ಮಂಡಳಿಯ ಯೋಜನೆಗಳನ್ನು ಮತ್ತು ಗೃಹ ನಿರ್ಮಾಣ ಕಾರ್ಯಕ್ರಮಗಳನ್ನು ಉತ್ಸಾಹದಿಂದ ಮುಂದುವರಿಸಲಾಗುವುದು. ಗೃಹ ನಿರ್ಮಾಣಕ್ಕೆ ಪ್ರಾಮುಖ್ಯತೆ ನೀಡುವುದರ ಜೊತೆಗೆ ನೈರ್ಮಲ್ಯ ನೀರು ಸರಬರಾಜು ಮತ್ತು ಕೊಳಚೆ ಪ್ರದೇಶ ನಿರ್ಮೂಲನಾ ಚಟುವಟಿಕೆಗಳಿಗೂ ಅಷ್ಟೇ ಪ್ರಾಮುಖ್ಯತೆ ನೀಡಲಾಗುವುದು," ನನ್ನ ಕ್ಷೇತ್ರದಲ್ಲಿ ಕಳೆದ ನಾವುಗಳು ಇಂದು ಅವರ ಮನೆಗಳ ಬಳಿ ಹೋದರೆ ಅವರನ್ನು ನೋಡಿದರೆ ಎಷ್ಟು ಸಂತೋಷವಾಗುತ್ತದೆಂದರೆ; ಅವರು ಗುಡಿಸಲುಗಳಲ್ಲಿ ಕಳೆದ ಹಿಂದಿನ ದಿನಗಳನ್ನು ಮರೆತು.....

ಶ್ರೀ ಅರಗ ಜ್ಞಾನೇಂದ್ರ : ಎಷ್ಟು ವರ್ಷದಲ್ಲಿ ಹನ್ನೊಂದು ಸಾವಿರ ಮನೆಗಳನ್ನು ಕಟ್ಟಿದ್ದಿರಿ?

ಡಾ; ಜಿ. ಪರಮೇಶ್ವರ್ : ಕಳೆದ ನಾಲ್ಕೂವರೆ ವರ್ಷಗಳಲ್ಲಿ ನಮ್ಮ ಕ್ಷೇತ್ರದಲ್ಲಿ ಕಟ್ಟಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ನೀವು ಮನೆಗಳನ್ನು ಹಂಚಿದ್ದು ಹೇಗೆ ? ಮನೆಗಳನ್ನು ಹಂಚುವಲ್ಲಿ ಒಂದು ಕ್ಷೇತ್ರದಿಂದ ಮತ್ತೊಂದು ಕ್ಷೇತ್ರಕ್ಕೆ ತಾರತಮ್ಯ ಹೇಗಾಯಿತು ? ನಮ್ಮ ಕ್ಷೇತ್ರದಲ್ಲಿ ಒಂದು ಸಾವಿರ ಮನೆಗಳನ್ನೂ ಕೊಡುವುದಕ್ಕಾಗಲಿಲ್ಲ!

ಅಧ್ಯಕ್ಷರು : ತಾವು ಮಾತನಾಡುವಾಗ ಇದರ ಬಗ್ಗೆ ಪ್ರಸ್ತಾಪ ಮಾಡಬಹುದು. ಈಗ ಮಾನ್ಯ ಸದಸ್ಯರು ಅವಕಾಶ ಮಾಡಿಕೊಡಬೇಕು.

ಡಾ; ಜಿ. ಪರಮೇಶ್ವರ್ : ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರರವರು ಮೀಸಲು ಕ್ಷೇತ್ರದಿಂದ ಬಂದಿಲ್ಲ. ನೀವು ಸಾಮಾನ್ಯ ಕ್ಷೇತ್ರದಿಂದ ಬಂದಿದ್ದೀರಿ. ನಾನು ಮೀಸಲು ಕ್ಷೇತ್ರದಿಂದ ಗೆದ್ದು ಬಂದಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಇಡೀ ರಾಜ್ಯಾದ್ಯಂತವಿರುವ ಮೀಸಲು ಕ್ಷೇತ್ರಗಳಿಗೆ ಅಷ್ಟೊಂದು ಸಂಖ್ಯೆಗಳಲ್ಲಿ ಮನೆಗಳನ್ನು ಕೊಟ್ಟಿದ್ದರೆ ಅಡ್ಡಿಯಿಲ್ಲ.

ಡಾ; ಜಿ. ಪರಮೇಶ್ವರ್ : ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ಜನಾಂಗದವರಿಗೆ ಬೇರೆ ಬೇರೆ ಕಾರ್ಯಕ್ರಮಗಳಡಿ ಮಂಜೂರಾಗಿದ್ದ ಮನೆಗಳು ಕೆಲವು ಸಂದರ್ಭಗಳಲ್ಲಿ ಬೇರೆ ಕಡೆಗಳಲ್ಲಿ ಲ್ಯಾಪ್ಸ್ ಆಗುತ್ತಿದ್ದುದನ್ನು ಗಮನಿಸಿ, ನಮ್ಮ ಕ್ಷೇತ್ರದಲ್ಲಿ ಅದರ ಅಗತ್ಯವಿರುವುದನ್ನು ಮನಗಂಡು ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ, ಅನ್ಯಾಯವಂತೂ ಆಗಿಲ್ಲ. ಬಡವರಿಗೋಸ್ಕರ ಕಟ್ಟಿಸಿಕೊಟ್ಟಿದ್ದೇವೆ, ಆದುದರಿಂದ, ತಾವು ಇದನ್ನು ಮೆಚ್ಚಬೇಕು, ಏಕೆಂದರೆ, ನಮ್ಮ ಕ್ಷೇತ್ರದಲ್ಲಿ ಸಾಹುಕಾರರಿಗೆ ಮನೆಗಳನ್ನು ಕಟ್ಟಿಲ್ಲ, ಟ್ರಾಕ್ಟರ್ ಇಟ್ಟುಕೊಂಡಿರುವವರಿಗೆ ಕಟ್ಟಿಲ್ಲ, ಪಂಪುಸೆಟ್ಟುಗಳನ್ನು ಇಟ್ಟುಕೊಂಡಿರುವವರಿಗೆ ಮನೆಗಳನ್ನು ಕಟ್ಟಿಲ್ಲ, ಬಡವರಿಗೋಸ್ಕರ ಕಟ್ಟಿರುವುದು, ನಿಮ್ಮ ಕ್ಷೇತ್ರದಲ್ಲಿ ಈ ಕೆಲಸನಾಗದಿದ್ದರೆ ತಾವು ಮಾತನಾಡುವಾಗ ಪ್ರಸ್ತಾಪಿಸಬಹುದು.

ಮಾನ್ಯ ಅಧ್ಯಕ್ಷರೆ, ನಾನು ಹೇಳಿದಂತೆ ಈ ಕಾರ್ಯಕ್ರಮ ಹೀಗೆಯೇ ಮುಂದುವರಿದುಕೊಂಡು ಹೋಗುತ್ತದೆ, ಮತ್ತೊಂದು ಪ್ರಾಮುಖ್ಯವಾದ ಕ್ಷೇತ್ರ ಶಿಕ್ಷಣ. 1999ರಲ್ಲಿ ಅಧಿಕಾರಕ್ಕೆ ಬಂದ ಸರ್ಕಾರ ತೀರ್ಮಾನ ಮಾಡಿದ್ದು ಏನೆಂದರೆ, ಶಿಕ್ಷಣ ಕೇಂದ್ರದಲ್ಲಿ ಐದು ವರ್ಷಗಳಲ್ಲಿ ಶೇಕಡ 80ರಷ್ಟು ಸಾಕ್ಷರತೆಗೆ ತೆಗೆದುಕೊಂಡು ಹೋಗುತ್ತೇವೆಂದು ಹೇಳುವ ಮೂಲಕ ಇದಕ್ಕೆ ಅಗತ್ಯವಾದ ಕಾರ್ಯಕ್ರಮಗಳನ್ನು ಸರ್ಕಾರ ಜಾರಿಗೆ ತಂದಿತು, ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಕೂಡ ಶಿಕ್ಷಣ ಕ್ಷೇತ್ರಕ್ಕೆ ಪ್ರೋತ್ಸಾಹ ಕೊಡಬೇಕಾದ್ದೇ. This is our constitutional obligation that below 14 years, it is the duty of the State to provide free education in this country. ಇದನ್ನು ನಾವು ಮಾಡಲೇಬೇಕಲ್ಲಾ ಯಾವುದೇ ಸರ್ಕಾರ ಬಂದರೂ ಮಾಡಲೇಬೇಕು. ಈಗ ಸಮ್ಮಿಶ್ರ ಸರ್ಕಾರ ಬಂದಿದೆಯೆಂದು ಬೇರೆ ರೀತಿ ಮಾತನಾಡುವುದು, ಅಥವಾ ಕೃಷ್ಣ ಸರ್ಕಾರವಿತ್ತೆಂದು ಬೇರೆ ಮಾತನಾಡಲು ಬರುವುದಿಲ್ಲ. This is a constitutional obligation that below 14 years, it is the State's responsibility. ಇದನ್ನು ಗಮನದಲ್ಲಿಟ್ಟುಕೊಂಡು ವರ್ಷದಿಂದ ವರ್ಷಕ್ಕೆ

ನಮ್ಮ ರಾಜ್ಯದಲ್ಲಿರುವ ಪ್ರೈಮರಿ ಮತ್ತು ಸೆಕೆಂಡರಿ ಎಜುಕೇಷನ್‌ಗೆ ಅನೇಕ ರೀತಿಯಲ್ಲಿ ಸವಲತ್ತುಗಳನ್ನು ಒದಗಿಸಿಕೊಡಬೇಕಾಗಿದೆ. ಕಳೆದ ವರ್ಷ ಆಯವ್ಯಯದಲ್ಲಿ ಎರಡೂವರೆ ಸಾವಿರ ಕೋಟಿ ರೂಪಾಯಿಗಳನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಒದಗಿಸಲಾಗಿತ್ತು. ಈ ಹಣ ಕಟ್ಟಡಗಳಿಗೆ ಇರಬಹುದು, ಬೇರೆ ಬೇರೆ ಕಾರ್ಯಕ್ರಮಗಳಿಗೆ ಇರಬಹುದು. ಉಚಿತ ಪಠ್ಯಪುಸ್ತಕ, ಸಮವಸ್ತ್ರ ಜೊತೆಗೆ ಕಂಪ್ಯೂಟರ್ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕಾಗಿ ಕಲ್ಪಿಸಲಾಗಿದೆ, ನಾನು ಪುನಃ ಕಂಪ್ಯೂಟರ್ ವಿಚಾರಕ್ಕೆ ಬರುತ್ತಿದ್ದೇನೆಂದು ತಿಳಿಯಬಾರದು. ಎಲ್ಲಿ end ಆಗುತ್ತದೋ, digital divide ಎನ್ನುವ ಮಾತು ಬರುತ್ತದೆ, ನಾನು ಈ ಮಾತನ್ನು ಬಹಳ ನೋವಿನಿಂದ ಹೇಳುತ್ತೇನೆ, Untouchability still practised in this county ! ಆದರೆ, ದುರ್ದೈವದ ಸಂಗತಿಯೆಂದರೆ, computer untouchability ಎಲ್ಲಿಯಾದರೂ ಬಂದರೆ ಹಳ್ಳಿಯಲ್ಲಿರುವವನಿಗೆ ಕಂಪ್ಯೂಟರ್ ತೋರಿಸದೆ ಹೋದರೆ, ಕಂಪ್ಯೂಟರ್ ಶಿಕ್ಷಣ ಕೊಡಿಸದೆ ಹೋದರೆ, ಪಟ್ಟಣದಲ್ಲಿರುವವರಿಗೆ ಮಾತ್ರ ನಾವು ಕಂಪ್ಯೂಟರ್ ಶಿಕ್ಷಣ ಕೊಡುವ ಮೂಲಕ ವೈಜ್ಞಾನಿಕವಾಗಿ ಮುಂದುವರಿದ ಎಲ್ಲಾ ರೀತಿಯ ಶಿಕ್ಷಣ ಕೊಡುತ್ತಾ ಹೋದರೆ ಹಳ್ಳಿಯಲ್ಲಿರುವವನಿಗೆ should he not feel that he is a computer untouchable. ? ಇದು ಆಗಬಾರದೆಂಬ ಕಾರಣಕ್ಕಾಗಿ ಸರ್ಕಾರ ಪ್ರತಿಯೊಂದು ಶಾಲೆಯಲ್ಲೂ, ಹೈಸ್ಕೂಲಿನಲ್ಲಿ ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣ ಕೊಡಬೇಕೆಂದು ತೀರ್ಮಾನ ಮಾಡಿ ಪ್ರತಿಯೊಂದು ಶಾಲೆಗಳಿಗೂ ಕಂಪ್ಯೂಟರ್ ಸೌಲಭ್ಯಗಳನ್ನು ಅಳವಡಿಸಿಕೊಟ್ಟಿತು. ಇದು ಬಹಳ ಉತ್ತಮವಾದ ಕಾರ್ಯಕ್ರಮವಾಗಿ ರೂಪುಗೊಂಡು ಇಡೀ ದೇಶಾದ್ಯಂತ ಈ ಕಾರ್ಯಕ್ರಮವನ್ನು ಸ್ವಾಗತಿಸಿದರು. ಕೆಲವು ಲೋಪ-ದೋಷಗಳಿರಬಹುದು, ಬರುವ ದಿನಗಳಲ್ಲಿ ಅದನ್ನು ಸರಿಪಡಿಸಿಕೊಂಡು ಹೋಗುವ ಕೆಲಸವಾಗಬೇಕು.

ಮತ್ತೊಂದು ಮನಮುಟ್ಟುವಂತಾದ್ದು ಬಿಸಿಯೂ4ಟದ ಕಾರ್ಯಕ್ರಮ. ನಾವು-ನೀವೆಲ್ಲರೂ ಗ್ರಾಮಾಂತರ ಪ್ರದೇಶದಿಂದ ಬಂದಿರುವವರಾಗಿದ್ದು, ಒಂದು ಹಳ್ಳಿಗೆ ಹೋಗಿ ಗಮನಿಸಿದರೆ ಕೂಲಿ ಮಾಡುವವರ ಮಕ್ಕಳಿಗೆ ಧರಿಸಲು ಬಟ್ಟೆ ಇರುವುದಿಲ್ಲ ಮತ್ತು ಅವರ ಮಕ್ಕಳು ಸ್ನಾನ ಮಾಡಿ ಎಷ್ಟೊ ದಿವಸಗಳಾಗಿರುತ್ತವೆ. ಇದನ್ನು ನೋಡಿದರೆ ನಮಗೆ ದುಃಖವಾಗುತ್ತದೆ, ಅಳು ಬರುತ್ತದೆ. ಅವರ ಮಕ್ಕಳು ಶಾಲೆಗೆ ಹೋಗುವುದಕ್ಕಾಗುವುದಿಲ್ಲ. ಏಕೆಂದರೆ, ತಂದೆ-ತಾಯಿಗಳಾದವರು ತಮ್ಮ ಮಕ್ಕಳನ್ನು ಹೇಗೆ ಶಾಲೆಗೆ ಕಳುಹಿಸುತ್ತಾರೆ? ಈ ನಿಟ್ಟಿನಲ್ಲಿ ನಾವು ಜಾರಿಗೆ ತಂದ ಕಾರ್ಯಕ್ರಮವೇನೆಂದರೆ, ಯಾರೋ ಚೆನ್ನಾಗಿ, ಅನುಕೂಲವಾಗಿರುವವರನ್ನು ನೋಡಿ ಈ ಬಿಸಿಯೂಟದ ಕಾರ್ಯಕ್ರಮದ ಜಾರಿಗೆ ತಂದದ್ದಲ್ಲ, ಇಂತಹ ಬಡವರ ಮಕ್ಕಳನ್ನು ನೋಡಿಯೇ ಕಾರ್ಯಕ್ರಮ ಜಾರಿಗೆ ತಂದಿದ್ದು ಮಧ್ಯಾಹ್ನದ ಬಿಸಿಯೂಟದ. ಕಾರ್ಯಕ್ರಮ ಕೇವಲ ಶಿಕ್ಷಣಕ್ಕೆ ಸಂಬಂಧಪಡದೆ ಇದರಿಂದ ಒಂದು ರೀತಿಯಲ್ಲಿ ಸಾಮಾಜಿಕ ಸೇವೆ ಸಲ್ಲಿಸಿದಂತಾಗುತ್ತದೆ. ರಾಜ್ಯದಲ್ಲಿರುವ ಸುಮಾರು 52 ಲಕ್ಷ ಮಕ್ಕಳಿಗೆ ಮಧ್ಯಾಹ್ನದ

ಬಿಸಿಯೂಟ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿ ಪ್ರಾರಂಭದಲ್ಲಿ ನ್ಯೂನತೆಗಳುಂಟಾಯಿತು. ಪಾತ್ರೆ ಸರಿ ಇರಲಿಲ್ಲವೆಂದು.....

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸದಸ್ಯರಾದ ಪರಮೇಶ್ವರ್ ಅವರಿಗೆ ಏಕೆ ಈ ಕೆಲಸ ಕೊಟ್ಟಿದ್ದಾರೋ ಗೊತ್ತಿಲ್ಲ! ನಾವೆಲ್ಲರೂ ನಿಮ್ಮ ಬಗ್ಗೆ ಬಹಳ ಗೌರವ ಇಟ್ಟುಕೊಂಡಿರುವವರಾಗಿದ್ದೇವೆ. ಉನ್ನತ ಶಿಕ್ಷಣ ಸಚಿವರಾಗಿ ತಾವು ಒಳ್ಳೆಯ ಕೆಲಸ ಮಾಡಿದ್ದೀರಿ. ತಾವು ಮಾತನಾಡುತ್ತಾ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮದ ಕುರಿತು ಪ್ರಸ್ತಾಪಿಸಿದ್ದೀರಿ. ಈ ತಿಂಗಳು ಒಂದನೇ ತಾರೀಖಿನಿಂದ ಶಾಲೆಗಳು ಪ್ರಾರಂಭವಾದರೂ ಇದುವರೆವಿಗೂ ಪಠ್ಯಪುಸ್ತಕಗಳನ್ನು ಕೊಟ್ಟಿಲ್ಲ. ಶೇಕಡ 10ರಷ್ಟೂ ಸಹ ಪಠ್ಯಪುಸ್ತಕಗಳು ವಿತರಣೆಯಾಗಿಲ್ಲ. ಸಮವಸ್ತ್ರಗಳನ್ನು ಒದಗಿಸಿಕೊಟ್ಟಿಲ್ಲ, ಮೊನ್ನೆ ದಿವಸ ನಿಮ್ಮ ಇಲಾಖಾಧಿಕಾರಿಗಳು ಪಠ್ಯಪುಸ್ತಕಗಳನ್ನು ಮುದ್ರಿಸುವ ಕುರಿತಂತೆ ಮೊದಲ ಸಭೆ ಕರೆದಿದ್ದಾರೆ! ಪ್ರತಿಪಕ್ಷದ ನಾಯಕನಾಗಿ ನಾನು ಫೋನ್ ಮಾಡಿದ ಬಳಿಕ ಮೀಟಿಂಗ್ ಕರೆದು ನನ್ನನ್ನು ಕೇಳಿದ್ದಾರೆ. ಮೂರು ತಿಂಗಳಾದರೂ ಪಠ್ಯಪುಸ್ತಕಗಳು ಸಿಗುವ ಸೂಚನೆಗಳಿಲ್ಲ. ಮುಂದೆ ನಮ್ಮ ಮಕ್ಕಳು ಮನೆಯಲ್ಲಿ ಊಟ ಮಾಡುವುದರ ಬದಲು ಮಧ್ಯಾಹ್ನದ ಬಿಸಿಯೂಟ ಮಾಡಿಕೊಂಡು ನೇರವಾಗಿ ಮನೆಗೆ ಬರಬೇಕು! ಅಭ್ಯಾಸ ಮಾಡುವ ಪ್ರಶ್ನೆಯೇ ಇಲ್ಲ. ಮೇಷ್ಟ್ರಿಗೆ ಕೆಲಸವಿಲ್ಲ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಸರ್ಕಾರ ಬರುತ್ತದೆ, ಹೋಗುತ್ತದೆ. ಅಧಿಕಾರಿಗಳಾದವರು ಯಾವುದಕ್ಕೆ ಆದ್ಯತೆ ನೀಡಬೇಕಿತ್ತೋ ಅದಕ್ಕೆ ನೀಡಿಲ್ಲ. ತಾವೂ ಕೂಡ ಉನ್ನತ ಶಿಕ್ಷಣ ಸಚಿವರಾಗಿದ್ದವರು. ಏನಾಗಿದೆ? ಏನಾಗಿಲ್ಲ ಎಂಬುದರತ್ತ ಸರ್ಕಾರ ತಕ್ಷಣ ಗಮನಹರಿಸಿದರೆ ಅಥವಾ 'ಯಡಿಯೂರಪ್ಪನವರೆ, ಇಷ್ಟು ದಿವಸದೊಳಗೆ ಪಠ್ಯಪುಸ್ತಕಗಳನ್ನು ಮುದ್ರಿಸಿ ತಲುಪಿಸುತ್ತೇವೆ, ಸಮವಸ್ತ್ರಗಳನ್ನು ಒದಗಿಸಿಕೊಡುತ್ತೇವೆ. ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮದಿಂದಾಗಿ ಮಕ್ಕಳು ಶಾಲೆಗೆ ಬಂದು ಉತ್ತಮ ರೀತಿಯಲ್ಲಿ ಶಿಕ್ಷಣ ಪಡೆಯಬೇಕೆಂದು ನಮಗೆ ಆಸೆ ಇದೆ. ಉಂಡು, ತಿಂದು ಮನೆಗೆ ಹೋಗಿ ಆಟವಾಡುವುದಕ್ಕೋಸ್ಕರ ಈ ಕಾರ್ಯಕ್ರಮ ಅಲ್ಲ' ಎಂದು ದೂರದೃಷ್ಟಿ ಇಟ್ಟುಕೊಂಡು ಸರ್ಕಾರಕ್ಕೆ ನಿಮ್ಮಂಥವರು ಸ್ವಲ್ಪ ತಿವಿದು ಹೇಳಿದರೆ ಸರ್ಕಾರ ಇದರ ಕಡೆ ಸ್ವಲ್ಪ ಗಮನಹರಿಸಬಹುದೇನೋ!

3.30 ಪಿ.ಎಂ.

ಡಾ; ಜಿ. ಪರಮೇಶ್ವರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರತಕ್ಕ ಮಾತ್ನನು ಒಪ್ಪಿಕೊಳ್ಳುತ್ತೇನೆ, ಏಕೆಂದರೆ, ಕಾರ್ಯಕ್ರಮಗಳು ಯಾವುದೇ ಒಂದು ಸಂದರ್ಭಕ್ಕೆ ಸೀಮಿತವಾಗಿರತಕ್ಕದ್ದಲ್ಲ, ಇದು ನಿರಂತರವಾಗಿ ಹೋಗತಕ್ಕದ್ದು, ಸರ್ಕಾರ ಬದಲಾವಣೆಯಾಗಿಬಹುದು. ಅಷ್ಟನ್ನು ಬಿಟ್ಟರೆ ವ್ಯವಸ್ಥೆ ಬದಲಾವಣೆಯಾಗುವುದಿಲ್ಲ. ಅಧಿಕಾರಿಗಳು ಯಾರೇ ಇರಬಹುದು. ಇಷ್ಟು ಹೊತ್ತಿಗಾಗಲೇ ಅವರು ಪುಸ್ತಕಗಳನ್ನು ಪ್ರಿಂಟ್ ಮಾಡಬೇಕಾಗಿತ್ತು.

ಯೂನಿಫಾರಂಗಳನ್ನು ರೆಡಿ ಮಾಡಬೇಕಾಗಿತ್ತು ಏಕೆಂದರೆ ಅವರ ಹತ್ತಿರ ಅಂಕಿಅಂಶಗಳು ಇದ್ದಾವೆ. ಒಂದನೆಯ ತರಗತಿಯದ್ದನ್ನು ಬಿಟ್ಟರೆ, ಎರಡು, ಮೂರು, ನಾಲ್ಕನೆಯ ತರಗತಿಗಳ ಅಂಕಿಅಂಶಗಳು ಅವರ ಹತ್ತಿರ ಇದ್ದಾವೆ. ಖಂಡಿತವಾಗಿ ಅವರು ಆ ಕೆಲಸವನ್ನು ಮಾಡಬೇಕಾಗಿತ್ತು. ನಾನೂ ಕೂಡ ಈಗ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ತಕ್ಷಣ ಆ ಪುಸ್ತಕಗಳು, ಬಟ್ಟೆಗಳು ಇವೆಲ್ಲವನ್ನೂ ಮಕ್ಕಳಿಗೆ ಒದಗಿಸಿ ಒಳ್ಳೆಯ ಶಿಕ್ಷಣ ಬರುವ ರೀತಿಯಲ್ಲಿ ಮಾಡಬೇಕೆಂದು ಒತ್ತಾಯವನ್ನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಮಾಡುತ್ತೇನೆ. ಆದರೆ, ಈವತ್ತು ಸಮ್ಮಿಶ್ರ ಸರ್ಕಾರವು ಕೂಡ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ಕೊಡತಕ್ಕಂಥದನ್ನು ಮಾನ್ಯ ರಾಜ್ಯಪಾಲರ ಮೂಲಕ ಹೇಳಿದ್ದಾರೆ. ಪ್ರಾಥಮಿಕ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡುವುದು ನನ್ನ ಸರ್ಕಾರದ ಶಿಕ್ಷಣ ನೀತಿಯ ಪ್ರಮುಖ ಅಂಶವಾಗಿದೆ. ಶಾಲೆಗಳ ಮತ್ತು ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸುವ ಮತ್ತು ಶಾಲೆಯ ಮಕ್ಕಳ ದಾಖಲಾತಿಯನ್ನು ಹೆಚ್ಚಿಸುವ ಪ್ರಯತ್ನವನ್ನು ನನ್ನ ಸರ್ಕಾರ ನಿರಂತರವಾಗಿ ಮಾಡುತ್ತದೆ, ಉಚಿತವಾಗಿ ಪುಸ್ತಕಗಳನ್ನು ಅಕ್ಷರದಾಸೋಹ ಯೋಜನೆಯ ಅಡಿಯಲ್ಲಿ ನೀಡುವ ಮೂಲಕ ಮತ್ತು ಸಕಾಲದಲ್ಲಿ ನೀಡುವ ಮಧ್ಯಾಹ್ನದ ಊಟ ಶಾಲೆಯನ್ನು ಮಧ್ಯದಲ್ಲೇ ಬಿಡುವ ಪ್ರಮಾಣವನ್ನು ತಗ್ಗಿಸಲು ಮೂಲಕ ಅವರನ್ನು ಇನ್ನಷ್ಟು ಬಲಪಡಿಸಲಾಗುವುದು. ಇದರ ಅವಶ್ಯಕತೆ ಇದೆ. ಯಾಕೆಂದರೆ ಇವತ್ತು ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲರಿಗೂ ಶಿಕ್ಷಣ ಸಿಗಬೇಕು. ಒಟ್ಟಾರೆ ಎಲ್ಲರೂ ಪ್ರಜ್ಞಾವಂತರಾಗಬೇಕು. ಇದಕ್ಕೆ ಬಹಳಷ್ಟು ಕಾರ್ಯಕ್ರಮಗಳನ್ನು ತಂದೆವು. ಕರ್ನಾಟಕ ಸಾಕ್ಷರಿ ಮಿಷನ್ ಎಂಬ ಒಂದು ಅಥಾರಿಟಿಯನ್ನೇ ಸರ್ಕಾರ ಪ್ರಾರಂಭ ಮಾಡಿತು. ಅದರ ಜೊತೆಗೆ ಯಾವತ್ತೂ ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಶಿಕ್ಷಣ ಕ್ಷೇತ್ರದಲ್ಲೂ ಬಹಳಷ್ಟು ಅನ್ಯಾಯವಾಗಿದೆ ಎಂಬ ಮಾತು ಬಂದಾಗ ನಾವು ಅದನ್ನು ಪ್ರೊಫೆಸರ್ ನಂಜುಂಡಪ್ಪನವರ ವರದಿಯನ್ನು ಆಧಾರವಾಗಿ ಇಟ್ಟುಕೊಂಡು ಒಂದು ಪ್ರತ್ಯೇಕವಾದ ವಿಚಾರವನ್ನು ಮಾಡಿ ಆ ಭಾಗದಲ್ಲೇ ಒಂದು ಕಮಿಷನರೇಟ್ ಆಗಬೇಕೆಂದು ಆ ಭಾಗದಲ್ಲೇ ಕಮಿಷನರೇಟ್ ಮಾಡಬೇಕೆಂದು ಸರ್ಕಾರ ಕಾರ್ಯಕ್ರಮ ಮಾಡಿತ. ಆ ಕಮಿಷನರೇಟ್ ಇವತ್ತಿನ ದಿವಸ ಕೆಲಸವನ್ನು ಮಾಡುತ್ತಿದೆ. ಇದರ ಜೊತೆಗೆ ಕೇಂದ್ರ ಸರ್ಕಾರದಿಂದ, ಏಕೆಂದರೆ ಎಲ್ಲರೂ ಈ ಕ್ಷೇತ್ರದಲ್ಲಿ ಅತ್ಯುತ್ತಮವಾದ ಕೆಲಸವನ್ನು ಮಾಡಿದಾಗ ಆ ಮಾತನ್ನು ಮೆಚ್ಚಬೇಕಾಗುತ್ತದೆ. ಹೇಳಬೇಕಾಗುತ್ತದೆ.

ಕೇಂದ್ರ ಸರ್ಕಾರದಲ್ಲಿ "ಸರ್ವ ಶಿಕ್ಷಣ ಅಭಿಯಾನ್" ಎಂದು ಏನು ಕಾರ್ಯಕ್ರಮವನ್ನು ಇಡೀ ದೇಶದಲ್ಲಿ ತಂದರು, ಇವತ್ತು ನಮ್ಮ ಶಾಲೆಗಳನ್ನು ನೋಬೇಕು. ಅಲ್ಲಿ ಬಹಳ ಸುಂದರವಾಗಿ ಆ ಕಟ್ಟಡಗಳನ್ನು ಮಾಡತಕ್ಕದ್ದು ಉಪಾಧ್ಯಾಯರಿಗೆ ತರಬೇತಿಯನ್ನು ಕೊಡತಕ್ಕದ್ದು ಅವರಿಗೆ ಪಠ್ಯಪುಸ್ತಕದಲ್ಲಿ ಹತ್ತಂಥ ಅನೇಕ ಟೀಚಿಂಗ್ ಏಡ್ಸ್‌ನ್ನು ಮಾಡತಕ್ಕದ್ದು ಇನ್ನೂ ಬೇರೆ ಬೇರೆ

ರೀತಿಯಲ್ಲಿ ಸರ್ವ ಶಿಕ್ಷಣ ಅಭಿಯಾನದ ಕಾರ್ಯಕ್ರಮದಲ್ಲಿ ಆ ಚೌಕಟ್ಟಿನಲ್ಲಿ ಸುಮಾರು 6 ಮತ್ತು 7 ವರ್ಷ ಆ ಕಾರ್ಯಕ್ರಮವನ್ನು ನಮ್ಮ ರಾಜ್ಯಕ್ಕೆ ಕೊಟ್ಟಿದ್ದಾರೆ. ನಮ್ಮ ತುಮಕೂರು ಜಿಲ್ಲೆಯಲ್ಲೇ ಆ ಏಳು ವರ್ಷದ ಅವಧಿಗೆ ಸುಮಾರು 430 ಕೋಟಿ ರೂಪಾಯಿಗಳಷ್ಟು ಹಣವನ್ನು ಒಂದು ಜಿಲ್ಲೆಗೆ ಖರ್ಚು ಮಾಡತಕ್ಕದ್ದು, ಎಂದರೆ ಆ ಕ್ಷೇತ್ರಕ್ಕೆ ಎಷ್ಟೊಂದು ಸೌಲಭ್ಯ ಸಿಗುತ್ತದೆ ? ಆದ್ದರಿಂದ ಒಟ್ಟಾರೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇನ್ನೂ ಹೆಚ್ಚಿನ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಗಮನಹರಿಸಬೇಕಾಗುತ್ತದೆ. ಅದಕ್ಕೆ ಸರ್ಕಾರ ಗಮನಹರಿಸಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳತುತ್ತೇನೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ., ನಾನೇ ಇದರಲ್ಲಿ ನಾಲ್ಕೂವರೆ ವರ್ಷ ಸಚಿವನಾಗಿ ಕೆಲಸ ಮಾಡಿದ್ದೇನೆ. ನಾನು ಇದೇ ಸದನದಲ್ಲಿ ವಿಶ್ವವಿದ್ಯಾನಿಲಯದ ಒಂದು ಬಿಲ್ಲನ್ನು ಮಂಡಿಸತಕ್ಕ ಸಂದರ್ಭದಲ್ಲಿ ಅದರ ಅವಶ್ಯಕತೆ ಏನಿದೆ ಎಂದು ಪ್ರಸ್ತಾಪ ಮಾಡಿದ್ದೆ, ಶಿಕ್ಷಣ, ಅದರಲ್ಲೂ ವಿಶೇಷವಾಗಿ ಉನ್ನತ ಶಿಕ್ಷಣ ಇವತ್ತು ನಮ್ಮ ಮಕ್ಕಳಿಗೆ ಎಷ್ಟು ಅವಶ್ಯಕತೆ ಇದೆ ? ಇಲ್ಲಿ ಓದಿದಂಥವರು ಬೇರೆ ಬೇರೆ ದೇಶಗಳಲ್ಲಿ ಒಳ್ಳೊಳ್ಳೆಯ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಒಳ್ಳೊಳ್ಳೆಯ ವಿಜ್ಞಾನಿಗಳಾಗಿದ್ದಾರೆ. ಇವತ್ತು ನಾಸಾದಲ್ಲಿ (NASA) ಅನೇಕ ವಿಜ್ಞಾನಿಗಳು ನಮ್ಮ ಕರ್ನಾಟಕದಿಂದ ಹೋಗಿರತಕ್ಕವರು. ಅವರಿಗೆ ಇಲ್ಲಿ ಅವಕಾಶ ಸಿಗದೇ ಇರಬಹುದು. ಅದಕ್ಕಾಗಿ ಅಲ್ಲಿ ಹೋಗಿ ಕೆಲಸ ಮಾಡಿ ನಮ್ಮ ರಾಜ್ಯ ಮತ್ತು ದೇಶಕ್ಕೆ ಹೆಸರನ್ನು ತಂದಿದ್ದಾರೆ. ಇವತ್ತು ಕ್ಯಾಲಿಫೋರ್ನಿಯಾದ ಸಿಲಿಕಾನ್ ವ್ಯಾಲಿಯಲ್ಲಿ ಸುಮಾರು 40 ಪರ್‌ಸೆಂಟ್ ಭಾರತ ದೇಶದಿಂದ ಹೋಗಿರತಕ್ಕಂಥ ಸಾಫ್ಟ್‌ವೇರ್ ಇಂಜಿನಿಯರ್ಸ್ ಇದ್ದಾರೆ. ಅದರಲ್ಲಿ ವಿಶೇಷವಾಗಿ ಹೆಚ್ಚು ಕರ್ನಾಟಕದಿಂದ ಹೋಗಿರುವವರಿದ್ದಾರೆ. ಇದಕ್ಕೆ ಕಾರಣ ಎಂದರೆ ಇಲ್ಲಿ ಉನ್ನತ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹವನ್ನು ನಮ್ಮ ರಾಜ್ಯದಲ್ಲಿ ಮೊದಲಿನಿಂದಲೂ ಬಂತು. ಖಾಸಗಿ ಸಂಸ್ಥೆಯವರಿಗೆ ಪ್ರಪ್ರಥಮವಾಗಿ ಮೊದಲನೆಯ ಖಾಸಗಿ ಸಂಸ್ಥೆ ಮಣಿಪಾಲ್‌ನವರು ಪ್ರಾರಂಭ ಮಾಡಿದರು. ಅದೇ ರೀತಿ ಇಡೀ ದೇಶಕ್ಕೆ ಎಲ್ಲಾ ರೀತಿಯಲ್ಲಿ ಒಂದು ರೀತಿಯಲ್ಲಿ ಸಹಾಯವಾಗತಕ್ಕ ರೀತಿಯಲ್ಲಿ ಅದು ಬೆಳೆದುಕೊಂಡು ಬಂದಿದೆ. ಆದರೆ ಇತ್ತೀಚೆಗೆ ವೃತ್ತಿ ಶಿಕ್ಷಣದಲ್ಲಿ ಸ್ವಲ್ಪ ಗೊಂದಲ ಸೃಷ್ಟಿಯಾಗಿದೆ. ಏನು 1992ರಲ್ಲಿ ಉನ್ನಿಕೃಷ್ಣನ್ ಜಡ್ಜ್‌ಮೆಂಟ್ ಆಗಿತ್ತು ಅದನ್ನು ಆಧಾರವಾಗಿಟ್ಟುಕೊಂಡು ನಮ್ಮ ರಾಜ್ಯದಲ್ಲಿ ಹತ್ತು ವರ್ಷ ಸರ್ಕಾರ ನೀತಿಗಳನ್ನು ಮಾಡಿದೆ. 11 ಜಡ್ಜ್‌ಸ್‌ನ ಪೀಠ ಜಡ್ಜ್‌ಮೆಂಟ್‌ನ್ನು ಕೊಟ್ಟಿತು. (constitutional bench) ಅದನ್ನು ನಾವು ಆಧಾರವಾಗಿ ಇಟ್ಟುಕೊಂಡು ವೃತ್ತಿ ಶಿಕ್ಷಣವನ್ನು ರೆಗ್ಯುಲೇಟ್ ಮಾಡಲು ಪ್ರಯತ್ನ ಮಾಡಿದೆವು. 75 ಪರ್‌ಸೆಂಟ್ ನಮಗೆ 25 ಪರ್‌ಸೆಂಟ್ ಮೆನೇಜ್‌ಮೆಂಟ್‌ಗೆ ಅದರಲ್ಲಿ ಇವತ್ತಿಗೂ ಕೂಡ ಆ ಗೊಂದಲ ಮುಂದುವರೆದಿದೆ. ಇದು ಬಹಳ ಸೂಕ್ಷ್ಮವಾದ ವಿಚಾರ. ಒಂದು ಕಡೆ ವಿದ್ಯಾರ್ಥಿಗಳ ಹಿತವನ್ನು ಕಾಪಾಡುವಂಥದ್ದು ಮತ್ತೊಂದು ಕಡೆ ಇನ್ಸ್‌ಟಿಟ್ಯೂಷನ್‌ಗಳೂ ಹಾಳಾಗಬಾರದು. ಈ ಎರಡನ್ನೂ ಬ್ಯಾಲೆನ್ಸ್ ಮಾಡತಕ್ಕದ್ದು

ಬಹಳ ಕಷ್ಟವಾದ ಕೆಲಸ, ನಾಲ್ಕೂವರೆ ವರ್ಷದಿಂದ ಆ ಕೆಲಸವನ್ನು ಮಾಡಿದೆವು. 75 ಭಾಗ ಸರ್ಕಾರಕ್ಕೆ 25 ಭಾ ಮೆನೇಜ್‌ಮೆಂಟ್‌ಗೆ ಎಂಬ ತೀರ್ಮಾನವನ್ನು ಅನೇಕ ಬಾರಿ ಪ್ರಸ್ತಾಪವಾಗಿ ವಿರೋಧ ಪಕ್ಷದ ನಾಯಕರುಗಳ ಜೊತೆ ಮಾತನಾಡಿ, ಸಂಬಂಧಪಟ್ಟ ಸಂಸ್ಥೆಗಳ ಆಡಳಿತ ಮಂಡಳಿಯವರ ಜೊತೆ ಮಾತನಾಡಿ, ಅದನ್ನು ಇಲ್ಲಿಯವರೆಗೆ ಸಮರ್ಪಕವಾಗಿ ಯಾರಿಗೂ ಅನ್ಯಾಯವಾಗದೇ ಸಾಮಾಜಿಕ ನ್ಯಾಯ ಮತ್ತು ಮೆರಿಟ್ ಈ ಎರಡನ್ನೂ ಕಾಪಾಡುವುದರಲ್ಲಿ ಯಶಸ್ವಿಯಾಗಿದ್ದೇವೆ, ಇವತ್ತಿಗೂ ಕೂಡ ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಮಾನ್ಯ ಮಂಜುನಾಥ್‌ರವರು ಅದನ್ನೇ ನಾವು ಮುಂದುವರೆಸಿಕೊಂಡು ಹೋಗುತ್ತೇವೆ, ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳಿಗೆ ಅನ್ಯಾಯವಾಗುವುದಿಲ್ಲವೆಂಬ ಮಾತನ್ನು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಅಧ್ಯಕ್ಷರೇ, ಮಾನ್ಯ ಪರಮೇಶ್ವರ್‌ರವರು ಸಿಇಟಿ ಬಗ್ಗೆ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದರು. ಆ ಗೊಂದಲ ಇವತ್ತಿಗೂ ಇದೆ, ನೀವು ನಾಲ್ಕು ವರ್ಷದಿಂದ ಏನು ಪ್ರಯತ್ನ ಮಾಡಿದಿರಿ ಆ ಪ್ರಯತ್ನ ಇನ್ನೂ ಒಂದು ಹಂತಕ್ಕೆ ಬರಲಿಲ್ಲ, ನಿಜವಾಗಿ ಒಂದು ವಾರ ಮೊದಲೇ ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಈ ಒಳಗಾಗಿಯೇ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಆದರೆ ಅದು ಇದುವರೆಗೆ ಆಗಿಲ್ಲ. ಏಕೆಂದರೆ 75 ಪರ್‌ಸೆಂಟ್ ಸರ್ಕಾರದ ಸೀಟು, 25 ಪರ್‌ಸೆಂಟ್ ಮೆನೇಜ್‌ಮೆಂಟ್ ಸೀಟು ಎಂದು ಹಂಚಿಕೆ ಮಾಡಿದ್ದೀರಿ ಅದರ ಬಗ್ಗೆ ಒಂದು ನಿರ್ಣಯವನ್ನು ಕೈಗೊಂಡಿದಿರಿ. ಆ ನಿರ್ಣಯವನ್ನು ಇವತ್ತು ಖಾಸಗಿ ಮೆನೇಜ್‌ಮೆಂಟ್‌ನವರು ಒಪ್ಪುತ್ತಿಲ್ಲ. 24ನೇ ತಾರೀಖಿನಿಂದ ಕೌನ್ಸಿಲಿಂಗ್ ಪ್ರಾರಂಭವಾಗುತ್ತದೆ. ಸರ್ಕಾರದ ವತಿಯಿಂದ ಮತ್ತು ಪ್ರೈವೇಟ್ ಮೆನೇಜ್‌ಮೆಂಟ್ ವತಿಯಿಂದ ಅವರೇ ಮಾತನಾಡುವುದು, ಒಂದು ರೀತಿಯಲ್ಲಿ ಇವರದ್ದು, ದ್ವಿಪಾತ್ರವಾಗಿದೆ, 24ನೇ ತಾರೀಖಿನಿಂದ ಕೌನ್ಸಿಲಿಂಗ್ ಪ್ರಾರಂಭವಾಗುತ್ತದೆ. ಆದ್ದರಿಂದ ತಕ್ಷಣವೇ ಯುದ್ಧೋಪಾದಿಯಲ್ಲಿ ಒಂದು ನಿರ್ಣಯವನ್ನು ಕೈಗೊಳ್ಳಬೇಕಾಗಿದೆ, ಸುಪ್ರೀಂಕೋರ್ಟ್‌ಗೆ ಹೋಗಿ ನಾವು ಪುನರ್‌ರಿಶೀಲನೆ ಸಲುವಾಗಿ ಸರ್ಕಾರದಿಂದ ಮನವಿಯನ್ನು ಕೊಡುತ್ತೇವೆಂದು ಹೇಳಿದಿರಿ, ಅದನ್ನು ಈ ಒಳಗಾಗಿಯೇ ಕೊಡಬಹುದಿತ್ತಲ್ಲಾ ? ಇಲ್ಲಿಯವರೆಗೆ ಇದಕ್ಕೆ ಕಾಯುವ ಅವಶ್ಯಕತೆ ಏನಿತ್ತು ? ಇಲ್ಲಿಯವರೆಗೆ ಏಕೆ ಕಾದಿರಿ ? ಇಲ್ಲಿ ಸಿಇಟಿ ಪರೀಕ್ಷೆ ಎಲ್ಲಾ ಆಗುತ್ತದೆ. ಅನಂತರ ಸರ್ಕಾರ ರಚನೆಯಾಗುತ್ತದೆ. ಸರ್ಕಾರದಲ್ಲಿ ಪೂರ್ಣ ಪ್ರಮಾಣದ ಕ್ಯಾಬಿನೆಟ್ ಆಗಲಿಲ್ಲ, ಪೂರ್ಣಪ್ರಮಾಣದ ಕ್ಯಾಬಿನೆಟ್ ಆಗಲಿಲ್ಲ, ಪೂರ್ಣಪ್ರಮಾಣದ ಕ್ಯಾಬಿನೆಟ್ ಆದಮೇಲೆ ನಾವು ಒಂದು ನಿರ್ಣಯ ತೆಗೆದುಕೊಳ್ಳುತ್ತೇವೆಂದರೆ 15 ದಿವಸ ಹೋಯಿತು. ಅನಂತರ ಈ ಮಧ್ಯದಲ್ಲಿ ನಿರ್ಣಯ ಕೈಗೊಂಡು ನಾವು ಈಗ ಸುಪ್ರೀಂ ಕೋರ್ಟ್‌ಗೆ ಹೋಗುತ್ತೇವೆಂದು ಹೇಳುತ್ತಿದ್ದೀರಿ, ಒಂದು ಇಲ್ಲವೇ ಎರಡು ತಿಂಗಳ ಹಿಂದೆಯೇ ನಿರ್ಣಯ ಕೈಗೊಳ್ಳುವಂಥದ್ದ ಇವತ್ತು ಇಲ್ಲಿಯವರೆಗೆ

ಎಳೆದುಕೊಂಡು ಬಂದಿರಿ, ಇದರಿಂದ ವಿದ್ಯಾರ್ಥಿಗಳಲ್ಲಿ ಮತ್ತು ಪಾಲಕರಲ್ಲಿ ಏನು ಮಾಡಬೇಕು ಎಂದು ಬಹಳಷ್ಟು ಗಲಿಬಿಲಿ ಉಂಟಾಗಿದೆ, ಕಳೆದ ಬಾರಿಯೂ ಹಾಗೆಯೇ ಆಯಿತು, ಈ ಬಾರಿಯೂ ಇದೇ ಮುಂದುವರೆಯುತ್ತಿದೆ, ಆದ್ದರಿಂದ ತಕ್ಷಣವೇ ಇದಕ್ಕೊಂದು ಮೆನೇಜ್‌ಮೆಂಟ್‌ನವರೂ ಇದಕ್ಕೆ ಸಹಕಾರವನ್ನು ಕೊಡಬೇಕು, ಮೆರಿಟೆಡ್ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಇದರ ಬಗ್ಗೆ ಸರಿಯಾದ ನಿರ್ಣಯವನ್ನು ಕೈಗೊಳ್ಳಬೇಕಾಗುತ್ತದೆ, ಸರ್ಕಾರ ತಕ್ಷಣವೇ ಒಂದು ದಿಟ್ಟವಾದಂಥ ನಿರ್ಣಯವನ್ನು ಕೈಗೊಳ್ಳಬೇಕಾಗುತ್ತದೆ,

ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಇದು ಬಹಳ ಸುಲಭ ಇದೆ, ಮಾನ್ಯ ಪರಮೇಶ್ವರ್‌ರವರು ಯೋಚನೆ ಮಾಡಬೇಕು ಏಕೆಂದರೆ ಪ್ರೈವೇಟ್ ಮೆನೇಜ್‌ಮೆಂಟ್‌ನ್ ಕಾಲೇಜಿನ ಮಾಲೀಕರು ಯಾರ್ಯಾರು ಇದ್ದಾರೆ ಅವರೆಲ್ಲರೂ ನಿಮ್ಮ ಎರಡು ಪಕ್ಷದವರೇ, ಅನೇಕರು ನಿಮ್ಮ ಟಿಕೇಟ್ ಮೇಲೆ ಗೆದ್ದು ಶಾಸಕರಾಗಿದ್ದಾರೆ. ದಯವಿಟ್ಟು ಬಡ ವಿದ್ಯಾರ್ಥಿಗಳ ಬಗ್ಗೆ ಕಳಕಳಿ ನಿಜವಾಗಿಯೂ ನಿಮ್ಮ ಹೃದಯದಲ್ಲಿದ್ದರೆ ನೀವು ಅವರನ್ನು ಕರೆದು ಕೂರಿಸಿ ಮಾತನಾಡಿ ನಮ್ಮ ಸರ್ಕಾರ ನಮ್ಮ ಆಲೋಚನೆಗಳೆಲ್ಲಾ ಬಡವರ ಪರವಾಗಿದೆ, ಇಂಜಿನಿಯರಿಂಗ್ ವೈದ್ಯಕೀಯ ವೃತ್ತಿ ಶಿಕ್ಷಣಗಳು ಬಡವರಿಗೆ ವಂಚನೆಯಾಗಬಾರದು, ದಯವಿಟ್ಟು ಒಪ್ಪಿಕೊಳ್ಳಿ ಎಂದು ಒಂದು ಮಾತನ್ನು ಹೇಳಿದರೆ ಅಡ್ಡಿ ಇಲ್ಲ. ನೀವು ಅತ್ತಂಗೆ ಮಾಡು, ನಾವು ಹೊಡೆದಂತೆ ಮಾಡುತ್ತೇನೆ, ಎಂದು ನೀವು ಇಷ್ಟು ವರ್ಷಗಳ ಕಾಳ ತಳ್ಳಿಕೊಂಡು ಬಂದಿದ್ದೀರಿ, ಜನ ಇದನ್ನು ಮೆಚ್ಚುತ್ತಾರಾ ಸ್ವಾಮಿ ? ಬಡವರ ಮಕ್ಕಳೆಲ್ಲಾ ಅಲ್ಲಿ ಸಿ.ಇ.ಟಿ. ಪರೀಕ್ಷೆಗೆ ಕೊರುತ್ತಾರೆ, ಈ ನಾಟಕ ಏಕೆ ? ಬೇಗ ಇದನ್ನು ಇತ್ಯರ್ಥ ಮಾಡಿ, ಇಡೀ ರಾಜ್ಯದಲ್ಲಿ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳ ಮ್ಯಾನೇಜ್‌ಮೆಂಟ್ ಕಾಂಗ್ರೆಸ್ ಮತ್ತು ಜನತಾ ದಳ (ಎಸ್) ಎರಡೂ ಪಕ್ಷಗಳವರಿಗೆ ಸೇರಿದವುಗಳಿಗೆ ಆಗಿವೆ. ಅದನ್ನು ಹೊರತು ಪಡಿಸಿ ಬೇರೆ ಯಾರದ್ದು ಇದೆ ಹೇಳಿ ? ಅವರನ್ನು ಕರೆಸಿ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ ; ಮಾನ್ಯ ಅಧ್ಯಕ್ಷರೇ, ಮಾನ್ಯ ಮಾಜಿ ವಿರೋಧ ಪಕ್ಷದ ನಾಯಕರು ಮತ್ತು ಶಾಸಕರಾದ ಜಗದೀಶ್ ಶೆಟ್ಟರ್‌ರವರು ಹೇಳಿರತಕ್ಕಂಥ ವಿಚಾರದಲ್ಲಿ ಸ್ವಲ್ಪ ತಿರುಳಿದೆ, ಸ್ವಲ್ಪ ನಿಧಾನವಾಗಿದೆ, ಆದರೆ ಮೊನ್ನೆ ನಡೆದಂತಹ ಸಚಿವ ಸಂಪುಟದ ಸಭೆಯಲ್ಲಿ ನಾವು ಒಂದು ತೀರ್ಮಾನ ಮಾಡಿದ್ದೇವೆ, ತಾವು ಹೇಳಿದ ಹಾಗ ಯುದ್ಧೋಪಾದಿಯಲ್ಲಿ day to day affairs monitor ಮಾಡುವ ಸಲುವಾಗಿ ಸಚಿವ ಸಂಪುಟದ ಉಪ ಸಮಿತಿಯೊಂದನ್ನು ರಚನೆ ಮಾಡಬೇಕೆಂದು ನಿರ್ಧಾರವಾಗಿದೆ, ಅದರಂತೆ ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಮೂರು ಜನ ಸದಸ್ಯರ ಸಂಪುಟದ ಉಪ ಸಮಿತಿಯೊಂದನ್ನು ರಚನೆ ಮಾಡಿದ್ದಾರೆ, ಈ ಉಪ ಸಮಿತಿ day to day problems ಏನು ಬರುತ್ತದೋ ಅದನ್ನು ನೋಡಿಕೊಳ್ಳುತ್ತದೆ, ತಾವು ಹೇಳಿದ ಹಾಗೆ, 75:25

ಎಂದು ನಾವು ಹೇಳಿದ್ದೇವೆ, ಮ್ಯಾನೇಜ್‌ಮೆಂಟ್‌ರವರು 25% ತೆಗೆದುಕೊಳ್ಳಬೇಕು, ಸರ್ಕಾರದವರು 75% ಇಟ್ಟುಕೊಳ್ಳಬೇಕೆಂದು ಮಾಡಿದ್ದೇವೆ, ಈಗ ಕಾಮೆಡ್-ಕೆ ನವರು ಪ್ಯಾರಲರ್ ಆಗಿ ಪರೀಕ್ಷೆಯನ್ನು ಕಂಡಕ್ಟ್ ಮಾಡಿದ್ದಾರೆ, ಆದ್ದರಿಂದ ಸ್ವಾಭಾವಿಕವಾಗಿ ಪೇರೆಂಟ್ಸ್‌ನಲ್ಲಿ ಮತ್ತು ಸ್ಟೂಡೆಂಟ್ಸ್‌ನಲ್ಲಿ ಸ್ವಲ್ಪ confusion ಇರತಕ್ಕಂಥದ್ದು ನಿಜ, ಆದರೆ ಈ ಸರ್ಕಾರ common students ಗೆ ಅನುಕೂಲವಾಗುವ ರೀತಿಯಲ್ಲಿ, ಸಾಮಾನ್ಯವಾದ ಕುಟುಂಬಗಳಿಂದ ಬಂದಿರತಕ್ಕಂಥ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ fee structure ಅನ್ನು ಮಾಡಲಿಕ್ಕೆ ಕ್ರಮ ಕೈಗೊಳ್ಳುತ್ತದೆ, ಹೈಕೋರ್ಟ್ ಇರಬಹುದು ಅಥವಾ ಸುಪ್ರೀಂಕೋರ್ಟ್ ಇರಬಹುದು, ಅದರಲ್ಲಿ ಇದಕ್ಕಾಗಿ ನಾವು ಹೋರಾಟ ಮಾಡುತ್ತೇವೆ, ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರ ಮನಸ್ಸನ್ನು ಒಲಿಸುವುದರಲ್ಲಿ ನಾವು ಯಶಸ್ವಿಯಾಗುತ್ತೇವೆ ಎನ್ನತಕ್ಕಂಥ ಒಂದು ಧೃಡವಾದ ನಿರ್ಧಾರ ನಮ್ಮದಾಗಿದೆ ಎಂಬುದನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ, ಸ್ವಾಭಾವಿಕವಾಗಿ ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು, ನಮ್ಮ ಹಿರಿಯ ಮಿತ್ರರಾದ ಜ್ಞಾನೇಂದ್ರರವರು ಜೆ.ಡಿ.(ಎಸ್) ಮತ್ತು ಕಾಂಗ್ರೆಸ್‌ನಲ್ಲೇ ಎಲ್ಲಾ ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಮತ್ತು ಶಿಕ್ಷಣ ಸಂಸ್ಥೆಗಳು ನಡೆಸತಕ್ಕವರು ಇದ್ದಾರೆ ಎಂದು ಹೇಳಿದರು, ಅದೊಂದು ಆಪಾದನೆಯೇ ಅಥವಾ ಕೇವಲ ವಿಷಯ ಪ್ರಸ್ತಾಪನೆಯೇ ಎಂಬುದು ನನಗೆ ಗೊತ್ತಾಗುತ್ತಿಲ್ಲ, ಅಂತೂ ಆ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ, ಆದರೆ ನಾವು ತಿಳಿದುಕೊಳ್ಳಬೇಕಾಗಿದೆ, ನಿಜ, ಜೆ.ಡಿ. (ಎಸ್)ನಲ್ಲೂ ಕೆಲವರು ಇದ್ದಾರೆ, ಕಾಂಗ್ರೆಸ್‌ನಲ್ಲೂ ಕೆಲವರು ಇದ್ದಾರೆ, ಈ ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಕೇವಲ ಕಾಂಗ್ರೆಸ್‌ನವರು ಅಥವಾ ಜೆ.ಡಿ. (ಎಸ್) ನವರು ಮಾತ್ರ ನಡೆಸುತ್ತಿಲ್ಲ, ಈ ರಾಜ್ಯದಲ್ಲಿ ನಾವು ಈ ಸದನದ ಹೊರಗಡೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರಿಗೆ ಇದು ಗೊತ್ತಿದೆ, ಅನೇಕ ಮಠ ಮಾನ್ಯಗಳು ಬಹಳ ಉತ್ತಮವಾಗಿ ಕೆಲಸವನ್ನು ಮಾಡುತ್ತಿದೆ, ಇದು ಕೇವಲ individuals ಮಾಡತಕ್ಕಂಥ ಕೆಲಸ ಮಾತ್ರವಲ್ಲ, ಇತ್ತೀಚೆಗೆ ದಿನಗಳಲ್ಲಿ Supreme Court Order ಆದ ಮೇಲೆ Capitation Fee ಬಗ್ಗೆ ಹಿಂದಿದ್ದ ಕೇಂದ್ರ ಸರ್ಕಾರದವರು ದೇಶದ ಎಲ್ಲಾ ರಾಜ್ಯಗಳಿಗೂ ಅನ್ವಯಿಸುವಂತೆ Ordinance ವೊಂದನ್ನು ಜಾರಿ ಕಾನೂನು ಮಾಡಿದ್ದಾರೆ ಇಷ್ಟೊತ್ತಿಗೆ ಈ ಸಮಸ್ಯೆ ಬಗೆಹರಿಯುತ್ತಿತ್ತು ಎಂಬುದು ಎಲ್ಲರಿಗೂ ಸಹಿತಿ ಗೊತ್ತಿರತಕ್ಕಂಥ ವಿಚಾರವಾಗಿದೆ, ಅದರಿಂದ ಖಾಸಗಿಯವರು ಶಿಕ್ಷಣ ಸಂಸ್ಥೆಗಳನ್ನು ನಡೆಸತಕ್ಕದ್ದೇ ಏನೋ ಒಂದು ದೇಶದ್ರೋಹದ ಕೆಲಸ ಮಾಡಿದಂತೆ ಎಂಬಂತಹ ಭಾವನೆ ಈ ಸದನದ ಚರ್ಚೆಯಲ್ಲಿ ಬರಬಾರದು.

ಶ್ರೀ ಅರಗ ಜ್ಞಾನೇಂದ್ರ : ನಾನು ಆ ಉದ್ದೇಶದಿಂದ ಆ ಮಾತನ್ನು ಹೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಕಾಂಗ್ರೆಸ್‌ನವರು ಮತ್ತು ಜೆ.ಡಿ.(ಎಸ್)ನವರಾದ ನಾವು ಇಲ್ಲಿ ಆಡಳಿತ ಪಕ್ಷದಲ್ಲಿ ಕುಳಿತಿದ್ದೇವೆ ಎಂಬ ಕಾರಣದಿಂದ ನಾವೇ ಇದನ್ನು ನಡೆಸುತ್ತಿದ್ದೇನೆ, ಎನ್ನುವಂತಹ ಭಾವನೆ ದಯವಿಟ್ಟು ಬರುವುದು ಬೇಡ.

ಶ್ರೀ ಅರಗ ಜ್ಞಾನೇಂದ್ರ : ನಾನು ಆ ಅರ್ಥದಲ್ಲಿ ಆ ಮಾತನ್ನು ಹೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಪೂರ್ತಿ ಹೇಳುವುದನ್ನೂ ಕೇಳುವುದಕ್ಕೆ ತಯಾರಿಲ್ಲವೆಂದರೆ ಹೇಗೆ ? ತಾವೇಕೆ ತಾಳ್ಮೆ ಕಳೆದುಕೊಳ್ಳುತ್ತಿದ್ದೀರಿ ? ಖಾಸಗಿ ಶಿಕ್ಷಣ ಸಂಸ್ಥೆಗಳವರು ನಮಗೂ ಸಹ ಕೆಲವೊಂದು ತೊಂದರೆಗಳಿವೆ ಎಂದು ಹೇಳಿಕೊಳ್ಳುತ್ತಿದ್ದಾರೆ, ಈಗಿರುವ fee structure ನಲ್ಲಿ ಈ ಸಂಸ್ಥೆಗಳನ್ನು ನಡೆಸುವುದು ಬಹಳ ಕಷ್ಟವಿದೆ ಎಂದು ಅವರು ಹೇಳುತ್ತಿದ್ದಾರೆ, ಅದಕ್ಕೋಸ್ಕರ ಒಂದು practical, viable ಸಾಧ್ಯವಿರತಕ್ಕಂಥ, ಸಾಮಾನ್ಯವಾದ ಬಡ ಮತ್ತು ಮಧ್ಯಮ ವರ್ಗದಿಂದ ಬಂದಿರತಕ್ಕಂಥ ಅಲ್ಪಸಂಖ್ಯಾತರು, ಬಡವರು ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ತೊಂದರೆಯಾಗುವ ರೀತಿಯಲ್ಲಿ ನಾವು ಈ ಸಮಸ್ಯೆಗೆ ಒಂದು ಪರಿಹಾರವನ್ನು ಕಂಡು ಹಿಡಿಯುತ್ತೇವೆ,

SRI J.C. MADHUSWAMY : Un-aided institutions vacancy fill up ಮಾಡಲಿಕ್ಕೆ ತಾವು ಎರಡು ವರ್ಷದ ಹಿಂದೆ ಒಂದು ಮೀಟಿಂಗ್ ಮಾಡಿದ್ದಿರಿ, ಈ ಸರ್ಕಾರ ಎಲ್ಲಿಂದಲಾದರೂ ವರ್ಗಾವಣೆ ಮಾಡಿ Vacanicies fill up ಮಾಡುತ್ತದೆ, ಇಲ್ಲದಿದ್ದರೆ ನೀವಾದರೂ recuritment ಮಾಡುವುದಕ್ಕೆ ಬಿಡುತ್ತೇವೆ ಎಂದು ಹೇಳಿದ್ದಿರಿ, ಇನ್ನೊಂದು ಕಡೆ 1992ರ ಹಿಂದೆ ಇದ್ದಂತಹ ಕೆಲವೊಂದು Un-aided institutions grant ಕೊಡುತ್ತೇವೆ ಎಂದು ಹೇಳಿದ್ದಿರಿ. ಮತ್ತೊಂದು ಕಡೆ 1992ರ ನಂತರ ಪ್ರಾರಂಭವಾದ ಸಂಸ್ಥೆಗಳನ್ನೂ ಕೂಡ consideration ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಿರಿ, ತಾವೇ ಹಿಂದೆ ಮಂತ್ರಿಯಾಗಿದ್ದಾಗ ಇದನ್ನು ಹೇಳಿದ್ದರಿಂದ ಇದಕ್ಕೆ ತಾವೇ ಉತ್ತರ ಹೇಳಬೇಕು. ಇವತ್ತಿನವರೆಗೂ ಆ ಸಂಸ್ಥೆಗಳ vanancies ಅನ್ನು ನೀವು fill up ಮಾಡಲಿಲ್ಲ. ಅವರಿಗೆ recruitment ಮಾಡಿಕೊಳ್ಳಲೂ ಸಹ ತಾವು ಬಿಡಲಿಲ್ಲ. Non-teaching staff ಅಂತೂ ಕಳೆದ 12 ವರ್ಷಗಳಿಂದ ಇವತ್ತಿನವರೆಗೂ ಕೂಡ ಯಾವುದೇ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಶಾಲಾ ಕಾಲೇಜುಗಳಿಗೆ ತೆಗೆದುಕೊಳ್ಳುವುದಕ್ಕೆ ಬಿಟ್ಟಿಲ್ಲ. ನಮ್ಮ stress is towards Primary and Secondary Education ಎಂದು ತಾವು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ, ಅದರ ಬಗ್ಗೆ ತಮ್ಮ ನಿಲುವೇನು ಎಂಬುದನ್ನು ತಾವು ಹೇಳಬೇಕಾಗುತ್ತದೆ. ಏತಕ್ಕಾಗಿ ಅವರಿಗೆ ವೇಕೆನ್ಸೀಸ್ ಫಿಲಪ್ ಮಾಡಲಿಕ್ಕೆ ತಾವು ಬಿಡುತ್ತಿಲ್ಲ ಅಥವಾ ನೀವೇ ಏಕೆ ವರ್ಗಾವಣೆ ಮಾಡಿ ಅಲ್ಲಿಗೆ ವೇಕೆನ್ಸೀಸ್ ಅನ್ನು ಕೊಡುತ್ತಿಲ್ಲ. ಒಂದು ಕಡೆ fee structures ಮಾಡುತ್ತೀರಿ. ಇನ್ನೊಂದು ಕಡೆ appointment ಗಳನ್ನು ಮಾಡಲಿಕ್ಕೆ ಏಕೆ ಬಾರ್ ಮಾಡಿಕೊಂಡು ಕುಳಿತಿದ್ದೀರಿ, ಎಂಬುದರ ತಾವು ಸ್ವಲ್ಪ ಹೇಳಬೇಕು. ಹಿಂದೆ ತಾವೇ ಈ ಖಾತೆ ನಿರ್ವಹಿಸಿದ್ದಿರಿ.

ಶ್ರೀ ಶಿವಾನಂದ ಎಸ್ ಪಾಟೀಲ್ : ಮಾನ್ಯ ಅಧ್ಯಕ್ಷರೇ, ನನಗೆ ಒಂದು ಕ್ಲಾರಿಫಿಕೇಷನ್ ಬೇಕಾಗಿದೆ, ಮೊನ್ನೆ Deputy Chief Minister ಮೈಸೂರಿನಲ್ಲಿ ಒಂದು statement ಮಾಡಿದ್ದಾರೆ, ನಾವೇ ಒಂದು ordinance ಹೊರಡಿಸುತ್ತೇವೆ. Kerala Chief Minister ಈಗಾಗಲೇ ಹೊರಡಿಸಿದ್ದಾರೆ ಎಂದು ಹೇಳಿದ್ದಾರೆ. ನೀವು ಏನಾದರೂ ಆ ತರಹ ಮಾಡುತ್ತೀರಾ ? ಮಾನ್ಯ ಮಂಜುನಾಥ್‌ರವರೂ ಕೂಡ ಮೊನ್ನೆ ಒಂದು statement ಮಾಡಿದ್ದಾರೆ. COMED-K ಆದರೆ ಅದು ಇನ್ನೂವರೆಗೆ ಆಗಿಲ್ಲ. ಇಂಟರೆಸ್ಟ್‌ನಿಂದ ನಿಮ್ಮ ಸ್ಟ್ಯಾಂಡ್ ಯಾವ ರೀತಿ ಇದೆ ಎಂಬುದನ್ನು ಹೇಳಿ ಬಿಡಿ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಪತ್ರಿಕಾ ಹೇಳಿಕೆ ಕೊಟ್ಟಿದ್ದರೆ. ಆದರೆ ಅವರಿಂದ ನಮಗೆ ಪತ್ರ ಬಂದಿಲ್ಲ. ಇದಾಗುವುದಿಲ್ಲ, ಈ ತರಹ ನಾವು ಮಾಡುವುದಕ್ಕಾಗುವುದಿಲ್ಲ ಎಂದು ಅವರಿಂದ ಪತ್ರ ಬಂದರೆ, ನಾನು ಅವರನ್ನು ಕರೆದು ಮಾತನಾಡುತ್ತೇನೆ ಎಂದು ಹೇಳಿದ್ದೇನೆ. ಬಹುತೇಕ ಇಷ್ಟರಲ್ಲೇ ಅದನ್ನು ಇತ್ಯರ್ಥ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಡಾ; ಜಿ. ಪರಮೇಶ್ವರ : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸಚಿವರು ಅದಕ್ಕೆ ಸೂಕ್ತವಾದ ಉತ್ತರವನ್ನು ಕೊಟ್ಟಿದ್ದಾರೆ. ನಾನು ಏನು ಹೇಳುವುದಕ್ಕೆ ಹೊರಟೆ ಎಂದರೆ, ಈ ಉನ್ನತ ಶಿಕ್ಷಣ ಅನ್ನತಕ್ಕಂಥದ್ದು ಕೇವಲ ಕೆಲವರಿಗೆ ಸೊತ್ತಾಗಬಾರದು ಅನ್ನುವಂತಾದ್ದು ಮೂಲವಾದ ಪ್ರಶ್ನೆ, ಇದನ್ನು ಬಗೆಹರಿಸುಕ್ಕೋಸ್ಕರವೇ ನಾವು 75% ಸರ್ಕಾರಕ್ಕೆ ಕೊಡಬೇಕು. 25% ಮಾತ್ರ ಮ್ಯಾನೇಜ್‌ಮೆಂಟ್‌ನವರು ತೆಗೆದುಕೊಳ್ಳಿ ಅನ್ನತಕ್ಕಂಥ ತೀರ್ಮಾನಕ್ಕೆ ನಾವು ಬಂದಿದ್ದೇವು. ಕಳೆದ ವರ್ಷದವರೆಗೂ ಆ ಕೆಲಸ ಪಡೆದುಕೊಂಡು ಬಂದಿದೆ, ಏಕೆಂದರೆ, ಅವತ್ತಿಗೆ uniform fee structure ಇರಲಿಲ್ಲ. Supreme Court ನ ಆದೇಶ ಬಂದಿದ್ದರೂ ಕೂಡ, ಮುಂದಿನ ವರ್ಷಕ್ಕೆ ಅಂದರೆ ಈ ವರ್ಷಕ್ಕೆ ಅದು ಅನ್ವಯವಾಗುತ್ತದೆ ಎಂದು ನಾವು ಆಗ ನಿರ್ಧಾರ ಮಾಡಿದ ಮೇಲೆ, ಕಳೆದ ವರ್ಷದವರೆಗೂ ಕೂಡ uniform fee structure ಬರಲಿಲ್ಲ, ನಾವು staggering ಅಂದರೆ ಸರ್ಕಾರಿ ಕಾಲೇಜುಗಳಲ್ಲಿ ಒಂದು ರೀತಿಯ fee structure ಖಾಸಗಿ ಸಂಸ್ಥೆಗಳಲ್ಲಿ ಇಂಥಿಂಥ ವರ್ಗಕ್ಕೆ ಒಂದು ರೀತಿಯ fee structure, ಎನ್ನತಕ್ಕಂಥನ್ನು ಮಾಡಿ, ಯಾರು ಮೆರಿಟೆಂಡ್ ಇದ್ದಾರೆ, ಮತ್ತು ಯಾರು ಹಿಂದುಳಿದವರು, ಹರಿಜನ-ಗಿರಿಜನರು ಈ ರೀತಿ ಬೇರೆ ಬೇರೆ ಸೇರಿದವರು ಇದ್ದರು, ಈ ರೀತಿಯಾಗಿ ಸಾಮಾಜಿಕವಾಗಿ ಕೂಡ ಅವರಿಗೆ ಅನ್ಯಾಯವಾಗಬಾರದು ಎಂಬ ಉದ್ದೇಶದಿಂದ ಆ ತೀರ್ಮಾನವನ್ನು ಮಾಡಿದ್ದೇವೆ. ಮಾನ್ಯ ಸಚಿವರು ಈಗ ತಾನೇ ಆ ಸಂಸ್ಥೆಗಳ ಆಡಳಿತ ಮಂಡಳಿಯವರನ್ನು ಕರೆಸಿ ಮಾತನಾಡುತ್ತೇನೆ ಎಂದು ಹೇಳಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಒಂದು ವಿಚಾರವನ್ನು ನಾವು ಈ ಸಂದರ್ಭದಲ್ಲಿ ತಿಳಿದುಕೊಳ್ಳಬೇಕಾಗಿದೆ, ಪ್ರತಿಯೊಂದು ಶಿಕ್ಷಣ ಸಂಸ್ಥೆಯೂ ಕೂಡ,

ನಾವು ಯಾವುದರ ಹೆಸರನ್ನೂ ಕೂಡ ಹೇಳುವುದಕ್ಕೆ ಹೋಗುವುದಿಲ್ಲ. ಯಾರೂ ಕೂಡ commercialisation of education ಮಾಡುವಂತಹ ದೃಷ್ಟಿಯಿಂದ ಶಿಕ್ಷಣ ಸಂಸ್ಥೆಗಳನ್ನೂ ಮಾಡಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಏಕೆಂದರೆ ನಮ್ಮಲ್ಲಿ ಇಲ್ಲಿಯವರೆಗೂ ಕೂಡ ಆ ಕಮರ್ಷಿಯಲ್ ಆ್ಯಂಗಲ್ ಇರಲಿಲ್ಲ. ಪೊಫೆಷನಲ್ ಕೋರ್ಸ್‌ಗೆ ವಿಶೇಷವಾಗಿ ಮಾರ್ಕೆಟ್ ಡಿಮ್ಯಾಂಡ್ ಬಂದ ನಂತರ ಕಮರ್ಷಿಯಲ್ ಆ್ಯಂಗಲ್ ಬಂತು. ಮೆಡಿಕಲ್ ಕಾಲೇಜುಗಳಲ್ಲಿ ಓದಿದ ಡಾಕ್ಟರ್‌ಗಳಿಗೆ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಒಳ್ಳೊಳ್ಳೆಯ ಸ್ಯಾಲರಿ ಕೊಡುವುದಕ್ಕೆ ಶುರವಾದಾಗ ಮತ್ತು ಇಂಜಿನಿಯರ್‌ಗಳಿಗೆ ಒಳ್ಳೊಳ್ಳೆಯ ಸಂಬಳಗಳನ್ನು ಕೊಡುವಂತಹ ವ್ಯವಸ್ಥೆಯಾದಾಗ ಅಲ್ಲಿ ಕಮರ್ಷಿಯಲ್ಲಿ ಆ್ಯಂಗಲ್ ಬಂತೇ ವಿನಃ. ಅಲ್ಲಿಯವರೆಗೂ ಕೂಡ it was only considered as a social service ಅದಕ್ಕೆ ಬೇರೆ ಬೇರೆ ಮಠಗಳು ಮಾಡಿದವು. ಬೇರೆ ಬೇರೆ ಸಂಸ್ಥೆಗಳು ಮಾಡಿದವು. ಇದೆಲ್ಲಾ ಒಂದು ಸಾಮಾಜಿಕ ಸೇವೆ ಅನ್ನುವಂತಹ ದೃಷ್ಟಿಯಿಂದ ಮಾಡಿದ್ದು ಇತ್ತೀಚಿನ ದಿನಗಳಲ್ಲಿ ಯಾರಾದರೂ ಕೆಲವರು ಅದನ್ನು as I said, because of the market demand..

ಶ್ರೀ ಜೆ.ಸಿ. ಮಾಧುಸ್ವಾಮಿ : ಸನ್ಮಾನ್ಯ ಮೊಯ್ಲಿಯವರ ನೇತೃತ್ವದ ಸರ್ಕಾರ ಬರುವವರೆಗೆ ಯಾವುದೂ ಕಮರ್ಷಿಯಲ್ ಆಗಿ ಇರಲಿಲ್ಲ. ಎಲ್ಲಾ ಚೆನ್ನಾಗಿಯೇ ಇತ್ತು. ನಂತರ ಎಲ್ಲಾ ಕೊಳೆಯುವುದಕ್ಕೆ ಶುರುವಾಯಿತು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಸ್ವತಃ ತಾವು ಕೆಲವು ಸಂಸ್ಥೆಗಳನ್ನು ನಡೆಸುತ್ತಿದ್ದೀರಿ, ತಾವು ಉನ್ನತ ಶಿಕ್ಷಣ ಸಚಿವರಾಗಿ ಕೂಡ ಕೆಲಸ ಮಾಡಿದ್ದೀರಿ, ತಾವೊಂದು ಜವಾಬ್ದಾರಿ ಸ್ಥಾನದಲ್ಲಿದ್ದೀರಿ, ಈಗ ನಮ್ಮ ಸಮಾಜದಲ್ಲಿ ಪರಿಸ್ಥಿತಿಯಲ್ಲಿ social service approach ಇಟ್ಟುಕೊಂಡು ನಡೆಸುತ್ತಿರತಕ್ಕಂಥ proffesional institutions ಒಂದು ಅಂದಾಜು ಶೇಕಡವಾರು ಎಷ್ಟು ಇರಬಹುದು ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದು ಮಾತ್ರವಲ್ಲ. ಒಂದು ಸ್ಟೇಜ್‌ನಲ್ಲಿ donation abolish ಮಾಡಬೇಕೆಂದು fee structure ಜಾಸ್ತಿ ಮಾಡಿದರು. ಈಗ donation ಮತ್ತು fee ಎರಡೂ ಬಂತು. ಎರಡೂ ಉಳಿದಿದೆ. ಹಿಂದಿನ ಅವಧಿಯಲ್ಲಿ ತೆರೆಯಲು ಅನುಮತಿ ಕೊಟ್ಟಂತಹ ಕಾಲೇಜುಗಳ ಸಂಖ್ಯೆ ಎಷ್ಟು ? ಅವುಗಳಲ್ಲಿ experienced teaching staff ಇದ್ದಾರಾ ? ಅದರ ಬಗ್ಗೆ ಕೂಡ ಹೇಳಬೇಕು. ಕೇವಲ ಕಾಲೇಜು ತೆರೆಯಲು ಅನುಮತಿ ಕೊಟ್ಟರೆ ಮಾತ್ರ ಸಾಕಾಗುವುದಿಲ್ಲ, ಒಂದು ಕಾಲೇಜಿನವರು ಒಬ್ಬ experienced teaching staff ಇಟ್ಟುಕೊಳ್ಳುವುದಕ್ಕೆ ಎಷ್ಟು ಕಷ್ಟ ಪಡುತ್ತಾನೆ ? ಅವನು ಸಿಗುವುದಕ್ಕೆ ಎಷ್ಟು ಪ್ರಯತ್ನ ಮಾಡುತ್ತಿದ್ದಾರೆ ಎಂಬುದನ್ನೆಲ್ಲಾ ತಾವು ನೋಡಬೇಕು. "colleges are for sale" ಎಂದು ಪತ್ರಿಕೆಯಲ್ಲಿ advertisment ಕೊಡುವಂತಹ ದಿನಗಳು ಮುಂದೆ ಬರಬಹುದು. ಅವರಿಗೆ ನಡೆಸಲಿಕ್ಕೆ ಸಾಧ್ಯವಾಗದೇ advertisment ಅನ್ನು ಕೊಡತಕ್ಕಂಥ ಪರಿಸ್ಥಿತಿ ಬರುತ್ತದೆ. ಅದಕ್ಕೆಲ್ಲಾ ಮಾನ್ಯ ಸಚಿವರು ಹೇಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈಗಾಗಲೇ ಬರುತ್ತಿದೆ, ಬರೀ ಉನ್ನತ ಶಿಕ್ಷಣ ಅಷ್ಟೇ ಅಲ್ಲ, ಪ್ರೈಮರಿ ಎಜುಕೇಷನ್‌ನಲ್ಲಿ ಡೊನೇಷನ್ ಹಾವಳಿ ಎಷ್ಟಾಗಿದೆ ಎಂದರೆ, ಕೆಲವು ವಿದ್ಯಾ ಸಂಸ್ಥೆಗಳಲ್ಲಿ ಎಲ್.ಕೆ.ಜಿ. ಮತ್ತು ಯು.ಕೆ.ಜಿಗೆ 50 ರಿಂದ 60 ಸಾವಿರ ಡೊನೇಷನ್ ತೆಗೆದುಕೊಳ್ಳುವ ಪರಿಸ್ಥಿತಿ ಬಂದಿದೆ. ಅಂದರೆ ಈ ಶಿಕ್ಷಣದ ವ್ಯಾಪಾರೀಕರಣ ಎಲ್ಲಿಗೆ ಮುಟ್ಟಿದೆ ಎಂದರೆ, ಬಡ ಜನರಿಗೆ ಯಾರಿಗೂ ಒಳ್ಳೆಯ ಶಿಕ್ಷಣ ಸಿಗಬಾರದು ಎನ್ನತಕ್ಕಂತಹ ಒಂದು ಪ್ರಜ್ಞಾ ಪೂರ್ವಕವಾದಂಥ ಪ್ರಯತ್ನವನ್ನು ನಿಮ್ಮ ಸರ್ಕಾರ ಒಂದೇ ಅಲ್ಲ, ಎಲ್ಲಾ ಸರ್ಕಾರಗಳು ಇವತ್ತು ಅದೇ ಕೆಲಸವನ್ನು ಮಾಡುತ್ತಿದೆ, ನೀವು ಅದನ್ನು ಬಹಳ ವೇಗವಾಗಿ ಮಾಡುತ್ತಿದ್ದೀರಿ. ಎಲ್.ಕೆ.ಜಿ.ಯಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ಹಣ ಇದೆ ಅವರು ಮಾತ್ರ ಓದಬಹುದು ಎನ್ನತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಹಿಂದೆ ಸನಾತನ ಧರ್ಮದಲ್ಲಿ ಹೇಳುತ್ತಿದ್ದರು. "ನಾ ಸೂತ್ರಾಯ ಮತಿತಥಾತು" ಎಂದು. ಈಗ ನಾ ಆರ್ಥಾಯ ಮತಿ ತಥಾತು ಎಂದು ಆಗಿದೆ, ಅಷ್ಟೇ ವ್ಯತ್ಯಾಸವಾಗಿರತಕ್ಕಂಥದ್ದು. ನಾ ಸೂತ್ರಾಯ ಮತಿತಥಾತು ಎನ್ನತಕ್ಕಂತಹ ಹೆಸರಿನಲ್ಲಿ ಶೂದ್ರರನ್ನು ಬಡವರನ್ನು ಶೂದ್ರರನ್ನು ಬಡವರನ್ನು ಶಿಕ್ಷಣದಿಂದ ದೂರ ಇಟ್ಟಿದ್ದರು. ಈಗ ನಾ ಅರ್ಥಾಯ ಮತಿತಥಾತಿ ಎಂದು ಹಣ ಇದ್ದವರಿಗೆ ಶಿಕ್ಷಣ ಇಲ್ಲದೆ ಇರುವವರಿಗೆ ಇಲ್ಲವೆಂದು ನೀವು ಇಡುತ್ತಿದ್ದೀರಿ, ದೊಡ್ಡ ವ್ಯತ್ಯಾಸವೇನಿಲ್ಲ ಇದರಲ್ಲಿ.

ಶ್ರೀ ವಾಟಾಳ್ ನಾಗರಾಜ್ : ಇವತ್ತು ಪತ್ರಿಕೆಯಲ್ಲಿ ಒಂದು ಸುದ್ದಿ ಬಂದಿದೆ ಅದನ್ನೇ ತಾವು ನೋಡಿರಬಹುದು. ಎಲ್‌ಕೆಜಿಗೆ ಹಣ ಕಟ್ಟುವುದಕ್ಕಾಗದೆ ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥದ್ದು ಇವತ್ತಿನ ಪತ್ರಿಕೆಯಲ್ಲಿ ಬಂದಿದೆ. ವ್ಯಾಪಾರಿಕರಣ ಮಾಡಿ ಅನೇಕ ವಿದ್ಯಾ ಸಂಸ್ಥೆಗಳು ದರೋಡೆ ಮಾಡುತ್ತಿವೆ, ರಾಜ್ಯಪಾಲರ ಭಾಷಣದಲ್ಲಿ ಅದರ ಬಗ್ಗೆ ಹೇಳಬೇಕಾಗುತ್ತದೆ, ನಿಜವಾಗಿ ಹೇಳಬೇಕೆಂದರೆ ಅದು ಹಗಲು ದರೋಡೆಯಾಗಿದೆ, ಇದರಲ್ಲಿ ಬೇರೆ ಮಾಡಿಲ್ಲ.

ಡಾ; ಜಿ. ಪರಮೇಶ್ವರ್ : ಸನ್ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟಿನ ಹನ್ನೊಂದು ಜಡ್ಜ್‌ಸ್ ಪೀಠ ಕಾನೆಸ್ಟಿಟ್ಯೂಷನಲ್ ಬೆಂಚ್ ಜಡ್ಜ್‌ಮೆಂಟ್ ಬಂದಿತು, ಅಲ್ಲಿಯವರೆಗೆ ಇವು ಯಾವ ಪ್ರಕಾರ್ಯಗಳು ಇರಲಿಲ್ಲ ಇದಕ್ಕೆ ಜಡ್ಜ್‌ಮೆಂಟ್ ಬಂದ ಮೇಲೆ ಅವರು ಹೇಳುತ್ತಾರೆ ಹೈಯರ್ ಎಜುಕೇಷನ್ is not going to be cheap.

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ವಿಷಯವನ್ನು ಸುಪ್ರೀಂ ಕೋರ್ಟಿಗೆ ಎಳೆದವರೇ ನೀವು. ಎಂದು ನಾನು ಹೇಳುತ್ತೇನೆ. 1991–92ನೇ ಇಸವಿಯಲ್ಲಿ ಈ ಇಶ್ಯೂವನ್ನು ಇಂಟೆನ್‌ಷನಲ್ಲಾಗಿ ಕೋರ್ಟಿಗೆ ಎಳೆದುಕೊಂಡು ಹೋದಿರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ತಾವು ಹೇಳತಕ್ಕಂಥದ್ದನ್ನೆಲ್ಲಾ ನಾವು ಒಪ್ಪಲ್ಲಿಕ್ಕೆ ಆಗುವುದಿಲ್ಲ. ಅವರು ಯಾವ ರೀತಿ ಪ್ರೊಜೆಕ್ಟ್ ಮಾಡುತ್ತಿದ್ದಾರೆಂದರೆ, 11 ಜನರ ಸುಪ್ರೀಂ ಕೋರ್ಟ್ ನ್ಯಾಯಧೀಶರ ನ್ಯಾಯಪೀಠ.....

ಅಧ್ಯಕ್ಷರು : ಬಹುಶಃ ಅನೇಕ ಜನ ಸದಸ್ಯರು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಲಿಕ್ಕೆ ಅವಕಾಶ ಕೇಳಿದ್ದಾರೆ. ಹೀಗಾಗಿ ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ. ಅವರು ದಯಮಾಡಿ ಮಾತನಾಡಲಿ. ಬಹಳ ಮುಖ್ಯವಾದುದಕ್ಕೆ ನೀವು ಇಂಟರ್‌ಫೀಯರ್ ಮಾಡಬಹುದೇ ಹೊರತು ಪ್ರತಿಯೊಂದು ಹಂತದಲ್ಲಿ ನೀವು ಈ ರೀತಿ ಮಾಡುತ್ತಾ ಹೋದರೆ ಏನಾಗುತ್ತದೆ? ಯಾರಿಗೆ ಅವಕಾಶ ಸಿಗುತ್ತದೆ ? ಡಾ; ಪರಮೇಶ್ವರ್‌ರವರೇ ದಯಮಾಡಿ ಈಲ್ಡ್ ಆಗಬೇಡಿ. ಅನೇಕ ಜನ ಹೊಸ ಸದಸ್ಯರಿಗೆ ನಾನು ಅವಕಾಶ ಮಾಡಿ ಕೊಡಬೇಕಾಗಿದೆ.

ಡಾ; ಜಿ. ಪರಮೇಶ್ವರ್ : ಒಂದು ನಾನು ಹೇಳುವುದೇನೆಂದರೆ, ಆ ಜಡ್ಜ್‌ಮೆಂಟ್‌ನಲ್ಲಿ ಕೂಡ higher education is not going to be cheap any more, It is going to be for a payment, ಎನ್ನುವಂತಹ ಅಂಶ ಬರುವಾಗ ಯಾವ ರೀತಿ ನಾವು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಕ್ಕೆ ? I am not yielding. Let me complete my statement. I do not want to go astray Let me complete.

SRI K.R. RAMESHKUMAR : The statement about Supreme Court is, it is final not because it is invalid. Since there is no further appeal it is final. ಅಷ್ಟೆ

SRI K. JAYAPRAKASH HEGDE : It is only a judicial order, not justice.

Dr. G. PARAMESWAR : if there is agrieved, they can go before the parliament under Article 142. ಎಂದು ಹೇಳಿದ್ದಾರೆ. ಅಗ್ರೀವ್ಡ್ ಪಾರ್ಟಿ ಪಾರ್ಲಿಮೆಂಟಿಗೆ ಹೋಗಬಹುದು ಎಂದು ಆಯಿತು. ಕೇಂದ್ರ ಸರ್ಕಾರ ಅದನ್ನೇ ಉಪಯೋಗಿಸಿಕೊಂಡು ಅವತ್ತೇ ಒಂದು ತೀರ್ಮಾನ ಮಾಡಿ ಒಂದು ಪರ್ಮನೆಂಟ್ ಅಕ್ಟ್ ತಂದಿದ್ದರೆ ಇಡೀ ದೇಶದಲ್ಲಿ ಇವತ್ತು ಈ ಸಮಸ್ಯೆ ಇರುತ್ತಿರಲಿಲ್ಲ. ಮಾನ್ಯ ಉಪ ಮುಖ್ಯ ಮಂತ್ರಿಗಳು ಮೈಸೂರಿನಲ್ಲಿ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅರ್ಡಿನೆನ್ಸ್ ತರುತ್ತಾರೆಂದು ಹೇಳಿದ್ದಾರಂತೆ, ನನಗೆ ಸಿಕ್ಕಿರತಕ್ಕಂತಹ ಕನಿಷ್ಟ ಮಾಹಿತಿ ಯಾವುದೇ ಒಂದು ರಾಜ್ಯ ಸರ್ಕಾರ over and above the Supreme court judgement ಅರ್ಡಿನೆನ್ಸ್ ಆಗಲಿ ಅಥವಾ ಸ್ಟೇಟ್ ಲಿಜಿಸ್ಲೇಷನ್ ಆಗಲಿ ಮಾಡುವುದಕ್ಕಾಗುವುದಿಲ್ಲ ಎಂದು ನನಗೆ ತಿಳಿದಿರುವ ಮಾಹಿತಿ, correct me if I am wrong. because I am not graduate ಆದ್ದರಿಂದ ಇಲ್ಲಿ ನಾವು ಲೆಜಿಸ್ಲೇಷನ್ ಮಾಡುವುದಿದ್ದರೆ ಇಷ್ಟು ಹೊತ್ತಿಗೆ ಮಾಡಿ ಮುಗಿಸುತ್ತಿದ್ದೆವು. It is not possible as I know. ಆದ್ದರಿಂದ ಕೇಂದ್ರ ಸರ್ಕಾರಕ್ಕೆ ಜಡ್ಜ್‌ಮೆಂಟ್‌ನಲ್ಲಿ ಹೇಳಿರುವ ಹಾಗೆ ಆರ್ಟಿಕಲ್ 142 ರಲ್ಲಿ ತೀರ್ಮಾನ ಮಾಡಿ ಬಿಲ್ ತಂದು 50–50 ಅಥವಾ 75–25 ಮಾಡಿದ್ದರೆ ಇಡೀ ದೇಶದಲ್ಲಿ ಒಂದು ಕಾನೂನು ಆಗುತ್ತಿತ್ತು. ಮಾನ್ಯ ಸಚಿವರು

ಸನ್ಮಾನ್ಯ ಮಂಜುನಾಥ್‌ರವರು ಸಂದರ್ಭ ಬಂದರೆ ಕೇಂದ್ರ ಸರ್ಕಾರಕ್ಕೆ ಕೂಡ ಒತ್ತಾಯ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆ ದೃಷ್ಟಿಯಿಂದ ನಮ್ಮಲ್ಲಿ ಉನ್ನತ ಶಿಕ್ಷಣ ಸಾಮಾನ್ಯರಿಗೆ ಸಿಗುವಂತೆ ಆಗಬೇಕು ಅದು ಮುಂದುವರೆಯಬೇಕು. 75 ಪರ್ಸೆಂಟ್ ನಾವು ಬಡ ಮಕ್ಕಳಿಗೆ ಸೋಷಿಯಲ್ ಈಕ್ವಿಟಿಗೋಸ್ಕರ ಒದ್ದಾಡುತ್ತಿದ್ದೇವೆ, ಅದು ಕಂಟಿನ್ಯೂ ಆಗಬೇಕೆಂಬುದನ್ನು ನಾನೂ ಸಹ ಒಪ್ಪುತ್ತೇನೆ. ಅನೇಕ ರೀತಿಯಲ್ಲಿ ಚಲಾವಣೆಗಳನ್ನು ತಂದೆವು ಅದನ್ನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. For the firsrt time in the country. ಅಂಡರ್ ಗ್ರಾಜ್ಯುಯೇಟ್ ಪ್ರೋಗ್ರಾಂನಲ್ಲಿ ಕಾನ್‌ಸ್ಟಿಟ್ಯೂಷನ್ ಅನ್ನು ತರುವ ಕೆಲಸ ನಾವು ಮಾಡಿದ್ದೇವೆ. ಕೊನೆ ಪಕ್ಷ ಪ್ರತಿಯೊಬ್ಬ ಪದವೀಧರನಿಗೆ ಕೂಡ ಸಂವಿಧಾನದ ಬಗ್ಗೆ ಕನಿಷ್ಟ ಪ್ರಜ್ಞೆ ಇರಲಿ ಎಂದು ನಾವು ಇದನ್ನು ತಂದೆವು. ಇನ್ನು ಅನೇಕ ಬದಲಾವಣೆಗಳನ್ನು ತಂದಿದ್ದೇವೆ. ಮಾನ್ಯ ಅಧ್ಯಕ್ಷರೆ, ಇನ್ನು ಅನೇಕ ಕ್ಷೇತ್ರಗಳು ಇವೆ. ನಾನು ಅದುವುದನ್ನು ಮುಟ್ಟುವುದಕ್ಕೆ ಹೋಗುವುದಿಲ್ಲ. ಬಹಳಷ್ಟು ಜನ ಇನ್ನೂ ಮಾತನಾಡುವವರು ಇದ್ದಾರೆ. ಸಚಿವರುಗಳು ಉತ್ತರಗಳನ್ನು ಕೊಡುವವರು ಇದ್ದಾರೆ. ನಾನು ಪ್ರಾರಂಭದಲ್ಲಿಯೇ ಹೇಳಿದ ಹಾಗೆ ಅನೇಕ ಅನಿವಾರ್ಯ ಕಾರಣಕ್ಕಾಗಿ ಜೊತೆಗೆ ಒಂದು ಜವಾಬ್ದಾರಿಯುತವಾದ ಸರ್ಕಾರ ರಚನೆ ಮಾಡಿರತಕ್ಕಂಥದ್ದು ಇದಕ್ಕೆ ಮೂಲ ರೂಪರೇಖೆಗಳನ್ನು ಸನ್ಮಾನ್ಯ ರಾಜ್ಯಪಾಲರ ಭಾಷಣದ ಮೂಲಕ ಈವತ್ತು ನಮ್ಮ ರಾಜ್ಯದ ಜನತೆಗೆ ಸರ್ಕಾರ ತಿಳಿಸಿ ಕೊಟ್ಟಿದೆ. ಇವೆಲ್ಲವೂ ಕೂಡ ಕಾರ್ಯಗತವಾಗಬೇಕು. ಬಹಳ ಯಶಸ್ವಿಯಾಗಿ ಕಾರ್ಯಗತವಾಗಬೇಕು. ಏಕೆಂದರೆ ಜನ ಇದನ್ನು ಯಾವುದೋ ರೀತಿಯಲ್ಲಿ ಗೇಲಿ ಮಾಡತಕ್ಕಂಥದ್ದು ಅಲ್ಲ. ಸಮ್ಮಿಶ್ರ ಸರ್ಕಾರ ಆರು ತಿಂಗಳು ಇರುತ್ತದೆ, ಮೂರು ತಿಂಗಳೂ ಇರುತ್ತದೆ, ಏನಾಗುತ್ತದೆ ಎಂದು ಅನುಮಾನ ಪಡುವುದು ಬೇಡ. ಈ ರಾಜ್ಯದ ಜನತೆಗೆ ಈಗಾಗಲೇ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯ ಮಂತ್ರಿಗಳು ಹೇಳಿರುವ ರೀತಿಯಲ್ಲಿ ಐದು ವರ್ಷ ಈ ಸರ್ಕಾರವನ್ನು ನಡೆಸಿ ಈ ರಾಜ್ಯದ ಜನತೆಗೆ ಅಭಿವೃದ್ಧಿ ಕೆಲಸಗಳನ್ನು ಈ ರಾಜ್ಯವನ್ನು ರಾಷ್ಟ್ರದ ಮುಂಚೋಣಿಗೆ ತೆಗೆದುಕೊಂಡು ಹೋಗತಕ್ಕಂತಹ ಕೆಲಸವನ್ನು ಮಾಡಬೇಕೆಂದು ಹೇಳಿ ಹೇಳುತ್ತಾ, ನಾನು ಮಾತುಗಳನ್ನು ಮುಗಿಸುವುದಕ್ಕೆ ಮುಂಚೆ ಸನ್ಮಾನ್ಯ ಗೌರವಾನ್ವಿತ ಈ ರಾಷ್ಟ್ರದ ರಾಷ್ಟ್ರಪತಿಗಳು ಒಂದು ಪುಸ್ತಕವನ್ನು ಬರೆದಿದ್ದಾರೆ. ಅದನ್ನು ಬಹಳ ಜನ ಓದಿದ್ದೀರಿ ಎಂದು ನಾನು ಭಾವಿಸಿದ್ದೇನೆ. ರಾಷ್ಟ್ರಪತಿ ಆಗುವುದಕ್ಕೆ ಮುಂಚೆ ಬರೆದಿರುವುದು India 2020 - A vision for the new millennium ಇದರಲ್ಲಿ ರಾಷ್ಟ್ರಪತಿಗಳಾದ ಡಾ; ಎ.ಪಿ.ಜೆ. ಅಬ್ದುಲ್ ಕಲಾರವರು ಮತ್ತು ವೈ.ಎಸ್. ರಾಜನ್‌ರವರು ಈ ಪುಸ್ತಕದಲ್ಲಿ ಅವರು ಒಂದು ಘಟನೆಯನ್ನು ತಿಳಿಸಿದ್ದಾರೆ. After one of the talks devivered by Dr. Kalam, a ten year old girl came up to him for his autograph. `what is your ambition he

asked her, `i want to live in a developed India' she replied without hesitation. This book is dedicated to her and the millions of Indians who share her aspirations. Iಇದನ್ನು ಮಾನ್ಯ ರಾಷ್ಟ್ರಪತಿಗಳು ಆ ಹೆಣ್ಣುಮಗುವಿಗೆ ಡೆಡಿಕೇಟ್ ಮಾಡಿದ್ದಾರೆ. ಇದರಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಅದು ಯಾವುದನ್ನೂ ಕೂಡ ತಮಗೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಕೊನೆಯದಾಗಿ ಅವರು ನಮಗೆಲ್ಲರಿಗೂ ಹೇಳಿದ್ದಾರೆ. ಏನೇನು ಮಾಡಬೇಕೆಂದು ಒಬ್ಬೊಬ್ಬರಿಗೂ. ಹೇಳಿದ್ದಾರೆ, ಅದರಲ್ಲಿ ಅವರು ಟೀಚರ್ಸ್‌ಗೆ, ಬ್ಯಾಂಕರ್ಸ್‌ಗೆ, ಡಾಕ್ಟರ್ಸ್‌ಗೆ, ಅಡ್ಮಿನಿಸ್ಟ್ರೇಟರ್ಸ್‌ಗೆ ಮತ್ತು ಆದರೆ ಪ್ರೊಫೆಷನಲ್ಸ್‌ಗೆ ಒಂದು ಮಾತು ಹೇಳುತ್ತಾರೆ. Devote a few days in a month to do something better, something speedier, something of high quality. something which will make you proud, something which will make you a poorer or a suffering person's life a little better. ಮುಂದುವರೆದು ಸರ್ಕಾರದಲ್ಲಿ ಇರತಕ್ಕಂತಹವರಿಗೆ, ಮಂತ್ರಿಗಳಿಗೆ ಮತ್ತು ಇಲಾಖೆಯ ಅಧಿಕಾರಿಗಳಿಗೆ ಹೇಳುತ್ತಾರೆ, one vision each to realise the vision of developed india. with internal course strength, preferably in partnership with other department, agencies, N.G.Os and private sector. Don' wait to start ಮೀಡಿಯದವರನ್ನೂ ಕೂಡ ಬಿಟ್ಟಿಲ್ಲ. ಅವರ ಜವಾಬ್ದಾರಿ ಕೂಡ ಅವರು ಜ್ಞಾಪಕ ಮಾಡಿ ಕೊಟ್ಟಿದ್ದಾರೆ, spread the message of success, however small the success are. There are many grim events and developments that you have to cover. But the positive can also be news. Build up an image of an India. with hundreds. and thousnands of heros and heroins were changing this countries destiny. ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ನಾಳೆಲ್ಲರೂ, ಸಹ, ಏನು ನಮ್ಮ ಸನ್ಮಾನ್ಯ ರಾಷ್ಟ್ರಪತಿಗಳು ಹೇಳಿರತಕ್ಕಂಥ ಈ ಮಾತುಗಳನ್ನು ನಾವು ಗಮನದಲ್ಲಿಟುಕೊಂಡು ನಮ್ಮ ನಮ್ಮ ಕಾರ್ಯಕ್ಷೇತ್ರದಲ್ಲಿ ಕೆಲಸವನ್ನು ಮಾಡಿ ನಮ್ಮಿಂದ ಅಗತಕ್ಕಂಥ ಅಳಿಲು ಸೇವೆಯನ್ನು a little contribution of ours to this society to this great nation.ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಪ್ರತಿಯೊಬ್ಬ ಶಾಸಕ ಮಿತ್ರರಿಗೂ ಸಹ ಪ್ರಾರ್ಥನೆ ಮಾಡಿಕೊಂಡು ಇಷ್ಟು ಹೊತ್ತು ನಾನು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

9. ನಿಯಮ 69ರ ಮೇರೆಗೆ

ವಿಷಯ : ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿನ ಅಕ್ಕಿ ಬಡವರಿಗೆ ತಲಪದೇ ಇರುವ ಬಗ್ಗೆ

ಅಧ್ಯಕ್ಷರು : ಈಗ ನಿಯಮ 69 ರಡಿಯಲ್ಲಿ ಈ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಬಡ ಕೂಲಿಕಾರರಿಗೆ ಹಂಚಲೆಂದು ಮೀಸಲಾದ